ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 25 ಜೂನ್ 22, 1980 ಬೆಲೆ : 50 ಪೈಸೆ

ಸಂಪಾದಕೀಯ

ಮುಂಗಡಪತ್ರ

ಹಲವಾರು ದಿನಬಳಕೆಯ ವಸ್ತುಗಳ ಮೇಲೆ ಹೊಸ ಕರಭಾರ ಹೇರದಿರುವ ಕೇಂದ್ರ ಮುಂಗಡಪತ್ರವು ಜನಸಾಮಾನ್ಯರು 'ಪರವಾಗಿಲ್ಲ' ಎಂದು ಹೇಳುವಂತೆ ಇದೆಯಾದರೂ, ಇದು ಕೇವಲ ತೋರ್ಬಿಕೆಗೆ ಮಾತ್ರ. ಏಕೆಂದರೆ ಈಗಾಗಲೇ ಅತಿಯಾಗಿ ಹೆಚ್ಚಿರುವ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ, ರೈಲ್ವೆ ಮುಂಗಡಪತ್ರದ ಪ್ರಕಾರ ಏರಿರುವ ಪ್ರಯಾಣ ಮತ್ತು ವಸ್ತು ಸಾಗಣೆ ದರಗಳು ಹೆಚ್ಚುಕಡಮೆ ಎಲ್ಲಾ ಸರಕುಗಳ ಬೆಲೆಯನ್ನು ಏರುವಂತೆ ಮಾಡಲಿವೆ. ಈಗಾಗಲೇ ಇವುಗಳ ಪರಿಣಾಮ ಗೊತ್ತಾಗುತ್ತಲಿದೆ. ಆದುದರಿಂದ ಏರಿದ ಬೆಲೆಗಳು ಕೆಳಗಿಳಿಯುತ್ತವೆ ಎಂಬ ಭ್ರಮೆ ಇರಬಾರದು.

ಮುಂಗಡಪತ್ರದಲ್ಲಿ 1417 ಕೋಟಿ ರೂಪಾಯಿಗಳ ನಿವ್ವಳ ಖೋತಾವನ್ನು ತೋರಿಸಲಾಗಿದೆ. ಇದನ್ನು ಹೇಗೆ ಭರ್ತಿಮಾಡುವುದು ಎಂಬ ಪ್ರಸ್ತಾಪವೇ ಇಲ್ಲ. ಪರದೇಶಗಳಿಂದ ಸಾಲ ಅಥವಾ ನೋಟುಗಳನ್ನು ಅಚ್ಚುಹಾಕುವುದು ಇಲ್ಲವೇ ಮಧ್ಯಕಾಲಿಕವಾಗಿ ಏನಾದರೂ ಹೊಸ ಕರಗಳನ್ನು ಏರಿಸುವುದು ಇಲ್ಲವೇ ಕಡ್ಡಾಯ ಠೇವಣಿಗಳ ಮೂಲಕ ಒದಗಿಸಿಕೊಳ್ಳುವುದು–ಇವೇ ಮೊದಲಾದ ಕ್ರಮವನ್ನು ಸರಕಾರ ವಹಿಸುವ ಸಾಧ್ಯತೆ ಇದೆ. ಇದರ ಪರಿಣಾಮವು ಹಣದುಬ್ಬರ–ಬೆಲೆಏರಿಕೆಗಳು.

ರಾಷ್ಟ್ರದಲ್ಲಿ ಅಗತ್ಯ ವಸ್ತುಗಳ ಸಮಗ್ರ ಬೇಡಿಕೆ ಎಷ್ಟಿದೆ ಎಂಬುದನ್ನು ಕ್ರೋಢೀಕರಿಸಿ ಅದಕ್ಕನುಗುಣವಾಗಿ ಸರಬರಾಜನ್ನು ಹೆಚ್ಚಿಸುವುದರ ಮೂಲಕ ಬೆಲೆಗಳನ್ನು ಸ್ಥಿಮಿತದಲ್ಲಿರಿಸಲಾಗುವುದೆಂದು ಅರ್ಥಸಚಿವರು ಹೇಳಿರುವರು. ಆದರೆ ಇದು ಸಾಧ್ಯವಾಗಬೇಕಾದರೆ ಜೀವನಾವಶ್ಯಕ ವಸ್ತುಗಳನ್ನು ಸರಕಾರವೇ ಖರೀದಿಸಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ಮೂಲಕ ವಿತರಣೆ ಮಾಡುವುದರಿಂದ ಇದು ಸಾಧ್ಯ ಎಂದೂ ಈ ಬಗೆ ಸರಕಾರ ಏನುಮಾಡಲಿದೆ ಎಂದೂ ಹೇಳಿಲ್ಲ. ಬಹುಶ ಸರಕಾರಕ್ಕೆ ಈ ಉದ್ದೇಶವೂ ಇಲ್ಲ. ●

ತ್ರಿಪುರಾಕ್ಕೆ ಸಹಾಯ ನೀಡಿರಿ

ಗುಡನಾಡಿನಲ್ಲಿರುವ 19 ಲಕ್ಷ ಜನಸಂಖ್ಯೆಯ ಪುಟ್ಟ ತ್ರಿಪುರಾ ರಾಜ್ಯದಲ್ಲಿ ಇತ್ತೀಚಿಗಿನ ಹಿಂಸಾತ್ಮಕ ಘಟನೆಗಳು 300 ಜನರನ್ನು ಬಲಿತೆಗೆದುಕೊಳ್ಳುವುದರೊಂದಿಗೆ ಎರಡು ಲಕ್ಷಕ್ಕಿಂತಲೂ ಹೆಚ್ಚಿನ ಜನರನ್ನು ಬೀದಿಪಾಲು ಮಾಡಿದೆ. ಎರಡು ವರ್ಷಗಳ ಹಿಂದೆ ಅಧಿಕಾರವಹಿಸಿದ ಎಡರಂಗ ಸರಕಾರವು ಗುಡ್ಡಗಾಡು ಜನಾಂಗದವರಿಗಾಗಿ ಅನೇಕ ಕ್ರಮವಹಿಸಿದೆ. ಮುಖ್ಯವಾಗಿ ಇವರಿಂದ ಕಸಿದುಕೊಂಡ ಜಮೀನನ್ನು ಹಿಂದೆ ಕೊಡುವುದು, ಗುಡ್ಡಗಾಡು ಜನಾಂಗದವರಿಗಾಗಿ ಪ್ರತ್ಯೇಕ ಸ್ವಾಯತ್ತೆ ಇರುವ ಗುಡ್ಡಗಾಡು ಜಿಲ್ಲೆಗಳನ್ನು ರಚಿಸುವುದು ಇವೇ ಮುಖ್ಯವಾದುವು. ಗುಡ್ಡಗಾಡು ಜನರಲ್ಲದವರಿಂದ ಭೂಮಿಯನ್ನು ಹಿಂತೆಗೆದುಕೊಳ್ಳುವಾಗ ಅವರಿಗೆ ಪರಿಹಾರ ಇತ್ತಿದೆ.

ಗುಡ್ಡಗಾಡು ಜನರ ಮಧ್ಯೆ ಎಡರಂಗ ಸರಕಾರದ ಪ್ರಭಾವ ಹೆಚ್ಚುತ್ತಿರುವುದನ್ನು ಸಹಿಸದೆ ತ್ರಿಪುರ ಉಪಜಾತಿ ಸಮಿತಿ (ಗುಡ್ಡಗಾಡು ಜನರ ಒಂದು ಸಂಘಟನೆ) ನಾಯಕತ್ವ ಮತ್ತು ಗುಡ್ಡಗಾಡು ಜನರಲ್ಲದವರ ಛಿದ್ರಕಾರಿ ಸಂಘಟನೆಗಳಾದ ಆನಂದ ಮಾರ್ಗ ಮತ್ತು ಅಮರ ಬಂಗಾಲಿ–ಇವು ಕೆಲವು ಹೊರದೇಶದ ಶಕ್ತಿಗಳ ಬೆಂಬಲದಿಂದ ಹಿಂಸಾತ್ಮಕ ಘಟನೆಗಳಿಗೆ ತಯಾರಿಮಾಡುತ್ತಾ ಬಂದಿವೆ. ಉಪಜಾತಿ ಸಮಿತಿಯ ತೀವ್ರಗಾಮಿಗಳಿಂದ ಪ್ರಚೋದಿಸಲ್ಪಟ್ಟ ಇತ್ತೀಚಿಗಿನ ಘಟನೆಗಳು ಈ ಉದ್ದೇಶವನ್ನು ಈಡೇರಿಸಲಾಗಿದೆ.

ಹಿಂಸಾಚರಣೆಯಿಂದಾದ ಕಷ್ಟನಷ್ಟಗಳನ್ನು ತುಂಬುವುದು, ಜನತೆಯಲ್ಲಿ ಆತ್ಮಸ್ಥೈರ್ಯ ಮೂಡಿಸಿ ವಿಶ್ವಾಸವನ್ನುಂಟುಮಾಡುವುದು, ಇವನ್ನೆಲ್ಲಾ ಜನತೆಯ ಹೋರಾಟದ ಫಲವಾಗಿ ಅಧಿಕಾರಕ್ಕೆ ಬಂದ ಎಡರಂಗವು ಅತೀ ಕಷ್ಟದ ಪರಿಸ್ಥಿತಿಯಲ್ಲಿ ನಡೆಸಬೇಕಾಗಿದೆ. ಪ್ರತಿಗಾಮಿ ಶಕ್ತಿಗಳ ಸಂದರ್ಭದ ಲಾಭ ಪಡೆಯುವುದನ್ನು ವಿರೋಧಿಸಬೇಕಾಗಿದೆ. ಈ ಕಠಿಣ ಪರಿಸ್ಥಿತಿಯಲ್ಲಿ ಪರಿಹಾರ ಕಾರ್ಯಕ್ಕಾಗಿ ಹಣ, ಬಟ್ಟೆ ಬರೆ, ಔಷಧ, ಆಹಾರಧಾನ್ಯ ಇವೇ ಮೊದಲಾದುವುಗಳನ್ನು ತುರ್ತಾಗಿ ತ್ರಿಪುರಾ ಮುಖ್ಯಮಂತ್ರಿಯವರಿಗೆ ಕಳುಹಿಸಿಕೊಡಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ತನ್ನ ಎಲ್ಲಾ ಘಟಕಗಳಿಗೂ, ಎಡ ಪ್ರಜಾಪ್ರಭುತ್ವ ಶಕ್ತಿಗಳಿಗೂ ಕರೆ ಈಯುತ್ತದೆ. ○

ಪ್ರಜಾಸತ್ತೆ, ಜನತೆಯ ಜೀವನವನ್ನು ರಕ್ಷಿಸಲು ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಜೂನ್ 9 ಮತ್ತು 10 ರಂದು ದೆಹಲಿಯಲ್ಲಿ ಸಭೆ ಸೇರಿ ಈ ಕೆಳಗಿನ ಹೇಳಿಕೆಗಳನ್ನು ಪತ್ರಿಕೆಗಳಿಗೆ ಬಿಡುಗಡೆ ಮಾಡಿದೆ.

ವಿಧಾನಸಭೆ ಚುನಾವಣೆಗಳಲ್ಲಿ ಅನೇಕ ರಾಜ್ಯಗಳಲ್ಲಿ ಕಾಂಗ್ರೆಸ್ (ಐ)ಗೆ ದೊರೆತಿರುವ ವಿಜಯವು ಜನತೆಯ ಹಕ್ಕು ಮತ್ತು ಪ್ರಜಾಪ್ರಭುತ್ವಗಳಿಗೆ ಅಪಾಯ ತರುವ ಬೆಳವಣಿಗೆ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್‌ಬ್ಯೂರೋ ಭಾವಿಸುತ್ತದೆ. ತನ್ನ ಸರ್ವಾಧಿಕಾರಿ ಆಶಯುಗಳನ್ನು ಬಿಟ್ಟುಕೊಡದ ಅಧಿಕಾರದಾಹಿ ಪಕ್ಷವೊಂದರ ಕೈಯಲ್ಲಿ ಅಧಿಕಾರವು ಈಗ ಕೇಂದ್ರೀಕೃತವಾಗುತ್ತದೆ. ಆದ್ದರಿಂದ, ದೇಶದ ಸಂವಿಧಾನವನ್ನು ಬದಲಾಯಿಸಿ, ಅಧ್ಯಕ್ಷೀ ಮಾದರಿಯ ಸರ್ಕಾರವನ್ನು ತರಬೇಕೆಂದು ಆಳುವ ಪಕ್ಷದ ವಕ್ತಾರರು ಮಾತನಾಡುತ್ತಿರುವುದು ಆಕಸ್ಮಿಕವೇನಲ್ಲ. ಸಂಸತ್ ಮಾದರಿಯ ವಿರುದ್ಧ ಪಿತೂರಿಯನ್ನು ಮಾಡಿ, ಸಂಸತ್ತಿನ ಮತ್ತು ವಿಧಾನಸಭೆಗಳ ಕಾಂಗ್ರೆಸ್ (ಐ) ಬಹುಮತವನ್ನು ಉಪಯೋಗಿಸಿಕೊಂಡು ಈ ಕೆಲಸಕ್ಕೆ ಸಂವಿಧಾನಾತ್ಮಕ ಮನ್ನಣೆಯನ್ನು ಪಡೆಯಬಹುದು. ಸಂವಿಧಾನದ ಮೂಲಭೂತ ರಚನೆಯನ್ನು ಬದಲಾಯಿಸಲು ಸಂಸತ್ತಿಗೆ ಹಕ್ಕಿಲ್ಲವೆಂಬ ಉಚ್ಚನ್ಯಾಯಾಲಯದ ಪ್ರಮುಖ ತೀರ್ಪನ್ನು ಸರ್ಕಾರ ಒಪ್ಪುವುದಿಲ್ಲವೆಂದು ಕಾನೂನು ಸಚಿವರು ಈಗಾಗಲೇ ಹೇಳಿದ್ದಾರೆ. ಮೂಲಭೂತ ಹಕ್ಕುಗಳಿಗಿಂತ ನಿರ್ದೇಶಕ ತತ್ವಗಳೇ ಹೆಚ್ಚೆಂದು ಸಾಧಿಸುವ ನೆಪದಲ್ಲಿ ಆಳುವ ವರ್ಗವು ಸಂವಿಧಾನವನ್ನು ಮತ್ತೆ ತಿರುಚಲಿದೆ. ಏನೇ ಆದರೂ ಅಧಿಕಾರವನ್ನು ತನ್ನ ಕೈಲೇ ಉಳಿಸಿಕೊಳ್ಳಬೇಕೆಂಬ ಹಟ ಕಾಂಗ್ರೆಸ್ (ಐ)ಗೆ ಬಂದಿದೆ.

ಏಕಪಕ್ಷದ ಆಳ್ವಿಕೆಯ ಆದರ ಉಪಾಯಗಳಿಗೆ ಕಾಂಗ್ರೆಸ್ (ಐ) ಅಗಾಧ ಬಹುಮತ ಪಡೆಯಿತೆಂದು ತೀರ್ಮಾನಿಸುವುದು ತಪ್ಪಾಗುತ್ತದೆ. ಜನತಾ ಆಳ್ವಿಕೆಯ ಬಗ್ಗೆ ಅಸಮಾಧಾನ ಮತ್ತು ಕಾಂಗ್ರೆಸ್ (ಐ)ಗೆ ಬದಲಿ ಪಕ್ಷ ಯಾವುದೂ ಇಲ್ಲದಿರುವುದು ಇಂಥ ಹಲವಾರು ಕಾರಣಗಳಿಂದ ಜನರು ಕಾಂಗ್ರೆಸ್ (ಐ)ಗೆ ಮತ ಹಾಕಿದ್ದಾರೆ. ಅಲ್ಲದೆ ಕಾಂಗ್ರೆಸ್ (ಐ) ಪಡೆದಿರುವ ಬಹುಸಂಖ್ಯೆಯ ಸ್ಥಾನಗಳು, ಎಂದರೆ-ಕೆಲವು ರಾಜ್ಯಗಳಲ್ಲಿ ಮುಕ್ಕಾಲರಷ್ಟು ಪಡೆದಿರುವ ಸ್ಥಾನಗಳು ಅದರ ಜನಪ್ರಿಯತೆಯ ಸಾಕ್ಷಿಯೇನಲ್ಲ. ಪ್ರಮಾಣಾನುಸಾರ ಪ್ರಾತಿನಿಧ್ಯಕ್ಕೆ ಎಡೆಮಾಡಿಕೊಡದ ಇವತ್ತಿನ ಚುನಾವಣಾ ವ್ಯವಸ್ಥೆಯ ಫಲಿತಾಂಶ ಇದು. ಯಾವುದೇ ರಾಜ್ಯದಲ್ಲಿ ಬಿದ್ದ ಮತಗಳಲ್ಲಿ ಶೇ. 50 ರಷ್ಟು ಕೂಡ ಕಾಂಗ್ರೆ ಪಡೆದಿಲ್ಲ. ಅದು ಮತಗಳಲ್ಲಿ ತುಂಬ ಕಡಿಮೆಯನ್ನು ಪಡೆದು ಹೆಚ್ಚು ಸ್ಥಾನಗಳನ್ನು ಪಡೆದಿದೆ. ಅನೇಕ ರಾಜ್ಯಗಳಲ್ಲಿ ಒಟ್ಟು ಮತದಾರರೊಳಗೆ ಅದಕ್ಕೆ ಸಿಕ್ಕಿರುವ ಬೆಂಬಲ ಶೇ. 16 ರಿಂದ 23ರವರೆಗೆ ಮಾತ್ರ. ಅನೇಕ ಬಂಡವಾಳಶಾಹಿ-ಭೂಮಾಲೀಕರ ವಿರೋಧಪಕ್ಷಗಳು ಸರಿಯಾದ ದೃಷ್ಟಿ ಮತ್ತು ರಾಜಕೀಯ ಮನೋಭಾವವನ್ನು ಪಡೆದಿರಲಿಲ್ಲವಾದ್ದರಿಂದ ವಿರೋಧಪಕ್ಷಗಳ ಮತಗಳು ಒಡೆದು ಕಾಂಗ್ರೆಗೆ ಜಯ ಲಭಿಸಿತು.

ಈಗ ತನಗೆ ಸಿಕ್ಕಿರುವ ವಿಜಯವು ತನ್ನ ಏಕಪಕ್ಷದ ಆಡಳಿತಕ್ಕೆ ಸಿಕ್ಕಿರುವ ಜನಪ್ರಿಯ ಬಹುಮತ ಎಂದು ಆಳುವ ಪಕ್ಷವು ಗಣಿಸಿದರೆ ಅದು ಜನತೆಯ ಪ್ರತಿಭಟನೆಯನ್ನು ಎದುರಿಸಬೇಕಾಗುತ್ತದೆ. ತಮ್ಮ ಸಾಮಾಜಿಕ-ಆರ್ಥಿಕ-ರಾಜಕೀಯ ಸಮಸ್ಯೆಗಳಿಗೆ ಸರ್ವಾಧಿಕಾರಿ ಆಡಳಿತ ಉತ್ತರವಲ್ಲ ಎಂಬುದನ್ನು ಜನತೆ ಈಗ ಹೆಚ್ಚುಹೆಚ್ಚು ತಿಳಿದುಕೊಳ್ಳುತ್ತಿದ್ದಾರೆ.

ಕಾಂಗ್ರೆನ ವಿಜಯದ ಪೂರ್ಣ ಹೊಣೆ ಕೆಲವು ಬಂಡವಾಳಶಾಹಿ–ಭೂಮಾಲೀಕ ವಿರೋಧಪಕ್ಷಗಳಿಗೆ ಸೇರಿದ್ದು. ಅವರು ತಮ್ಮ ಗುಂಪುಜಗಳಗಳಲ್ಲೇ ಮುಳುಗಿ ಸಾರ್ವತ್ರಿಕ ಅಪಾಯವನ್ನು ಮರೆತರು. ಮತಗಳು ಒಡೆಯುವುದನ್ನು ತಪ್ಪಿಸಲು ಪರಸ್ಪರ ಚುನಾವಣಾ ಹೊಂದಾಣಿಕೆ ಮತ್ತು ವಾಮಪಕ್ಷಗಳ ಜೊತೆ ಮೈತ್ರಿ ಸಾಧಿಸಲು ಅವರು ನಿರಾಕರಿಸಿದಾಗ, ತಾವು ಸರ್ವಾಧಿಕಾರವನ್ನು ಎದುರಿಸಿ ಪ್ರಜಾಪ್ರಭುತ್ವವನ್ನು ರಕ್ಷಿಸುತ್ತೇವೆಂದು ಅವರು ಹೇಳಿಕೊಂಡ ಮಾತಿಗೆ ಬೆಲೆಯಿಲ್ಲವಾಯಿತು. ಈ ಪಕ್ಷಗಳ ನಾಯಕರು ಮಂತ್ರಿಪದವಿಗಳ ಮೇಲೆ ಕಣ್ಣುನೆಟ್ಟು, ತಮ್ಮ ಬಲಾಬಲಗಳನ್ನು ಉತ್ಪ್ರೇಕ್ಷಿಸಿ ಮುಂದಿರುವ ಅಪಾಯವನ್ನು ಮರೆತರು. ವಾಮಪಂಥ ವಿರೋಧಿ ಹೇಳಿಕೆಗಳನ್ನು ಕೊಡುವುದರಲ್ಲೇ ಕೆಲವರು ಮುಳುಗಿದರು. ಅವರ ಬಲ ಎಷ್ಟೇ ಇದ್ದರೂ ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲು ಅವರಿಗೆ ಒಂದು ವಾಮಪಂಥೀಯ ಆಧಾರ ಬೇಕೆಂಬುದನ್ನು ಮರೆತರು. ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ (ಯು) ವಾಮಪಕ್ಷ ಮತ್ತು ಜನತಾದ ಜೊತೆ ಸೇರಿದ್ದಿದ್ದರೆ ಅಲ್ಲಿನ ಕಥೆಯೇ ಬೇರೆಯಾಗಿರುತ್ತಿತ್ತು. ಕಾಂಗ್ರೆಸ್ (ಯು) ಮತ್ತು ಲೋಕದಳಗಳು ಹೊಂದಾಣಿಕೆಗೆ ಬಂದು, ವಾಮಪಕ್ಷಗಳ ಜೊತೆ ಸೇರಿದ್ದಿದ್ದರೆ ಬಿಹಾರದಲ್ಲಿ ಕಾಂಗ್ರೆಯನ್ನು ಧೂಳೀಪಟಮಾಡಬಹುದಿತ್ತು. ಕಾಂಗ್ರೆಯನ್ನು ಸೋಲಿಸಲು ತಮಗೆ ಸ್ವರ್ಗದಿಂದ ಬಹುಮತಬರಲಿದೆಯೆಂಬ ರೀತಿಯಲ್ಲಿ ಚರಣಸಿಂಗ್ ವರ್ತಿಸಿರದಿದ್ದರೆ ಉತ್ತರ ಪ್ರದೇಶದ ಕಥೆಯೂ ಬೇರೆಯಾಗಿರುತ್ತಿತ್ತು.

ಬಂಡವಾಳಶಾಹಿ - ಭೂಮಾಲೀಕ ಪಕ್ಷಗಳ ಅಸಹಕಾರ ಮತ್ತು ಅವುಗಳ ಕುಂದಿದ ಚುನಾವಣಾ ಬಲವನ್ನು ಅರಿತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಎಲ್ಲರೂ ಒಗ್ಗಟ್ಟಾಗಿರೆಂದು ಪದೇಪದೇ ಕರೆ ನೀಡಿತು. ಒಂದು ವಿಶಾಲ ಚುನಾವಣಾ ಒಗ್ಗಟ್ಟು ಮೂಡುವುದಕ್ಕೆ ಪ್ರೇರಕವಾಗಲು ಮೊದಲಾಗಿ ವಾಮಶಕ್ತಿಗಳನ್ನು ಶೀಘ್ರವಾಗಿ ಒಗ್ಗೂಡುವಂತೆ ಪಕ್ಷವು ಮಾಡಿತು.

ವಿಭಿನ್ನ ಫಲಿತಾಂಶಗಳು :

ವಾಮಪಕ್ಷಗಳ ಐಕ್ಯತೆ ಮತ್ತು ವಿಶಾಲ ಪ್ರತಿರೋಧಕ್ಕಾಗಿ ನಡೆಸಿದ ಹೋರಾಟ ಎಲ್ಲೆಲ್ಲಿ ಸಫಲವಾಯಿತೋ ಅಲ್ಲೆಲ್ಲ ಕಾಂಗ್ರೆಗೆ ಮತ್ತು ಅದರ ಏಕಪಕ್ಷ ಆಡಳಿತದ ಹಂಬಲಕ್ಕೆ ಏಟು ಬಿದ್ದಿದೆ. ತಮಿಳುನಾಡಿನಲ್ಲಿ ಎ.ಐ. ಡಿ.ಎಂ.ಕೆ. ಪಕ್ಷವು ವಾಮ ಮತ್ತು ಇತರ ಪಕ್ಷಗಳ ಜೊತೆ ಹೊಂದಾಣಿಕೆ ಮಾಡಿಕೊಂಡಿದ್ದರಿಂದ ಡಿ. ಎಂ. ಕೆ.–ಕಾಂಗ್ರೆ ಕೂಟಕ್ಕೆ ಛಾರಿ ಪೆಟ್ಟುಕೊಡಲು ಸಾಧ್ಯವಾಯಿತು. ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಗೆ ಶೇ. 31 ಮತ ಬಿದ್ದಿದ್ದರೆ ಈಗ ಅದು ಶೇ. 20.73ಕ್ಕೆ

[ಕಡೆಯ ಪುಟ ನೋಡಿ]

ಅತ್ಯಾವಶ್ಯಕ ಸೇವೆಗಳಲ್ಲಿ ಮುಷ್ಕರ ನಿಷೇಧಕ್ಕೆ ವಿರೋಧ

ಕರ್ನಾಟಕ ಸರಕಾರ ಅತ್ಯಾವಶ್ಯಕ ಸೇವೆಗಳಾದ ವಿದ್ಯುಚ್ಛಕ್ತಿ, ನೀರು ಸರಬರಾಜು, ಟ್ರಾನ್ಸ್‌ಪೋರ್ಟ್ ಮೊದಲಾದ ಸೇವೆಗಳಲ್ಲಿ ದುಡಿಯುತ್ತಿರುವ ಕಾರ್ಮಿಕರ ಮುಷ್ಕರ ಪ್ರತಿಬಂಧಿಸುವ ಕಾನೂನು ಪಾಸುಮಾಡುವುದನ್ನು ವಿರೋಧಿಸಲು ಬಿಜಾಪುರ ಜಿಲ್ಲಾ ಬ್ಯಾಂಕ್ ನೌಕರರ ಸಂಘ, ನ್ಯಾಷನಲ್ ಆರ್ಗನೈಸೇಶನ್ ಆಫ್ ಬ್ಯಾಂಕ್ ವರ್ಕರ್ಸ್, ಎಸ್. ಸಿ. ಬಿ ಎ., ಕೆ. ಎಸ್. ಆರ್. ಟಿ ಸಿ. ಸ್ಟಾಫ್ ಹಾಗೂ ವರ್ಕರ್ಸ್ ಫೆಡರೇಶನ್, ಬಿಜಾಪುರ ಜಿಲ್ಲಾ ನಗರಸಭೆ ನೌಕರದಾರರ ಫೆಡರೇಶನ್, ಬಿಜಾಪುರ ಮುನಿಸಿಪಲ್ ಕಾಮಗಾರ ಯೂನಿಯನ್, ಪಿ. ಡಬ್ಲ್ಯು. ಡಿ. ವರ್ಕರ್ಸ್ ಯೂನಿಯನ್, ನೂಲಿನ ಗಿರಣಿ ಕೆಲಸಗಾರರ ಸಂಘ, ಎಲ್.ಐ.ಸಿ. ನೌಕರದಾರರ ಸಂಘ, ಎನ್. ಒ. ಐ. ಡಬ್ಲ್ಯು. ಬಿಜಾಪುರ ಶಾಖೆ, ಕೆ. ಎಸ್. ಆರ್. ಟಿ ಸಿ. ವರ್ಕರ್ಸ್ ಅಸೋಸಿಯೇಶನ್, ಕೆ. ಇ. ಬಿ. ನೌಕರದಾರರ ಅಸೋಸಿಯೇಶನ್‌ಗಳೆಲ್ಲ ಸೇರಿ ಮತಪ್ರದರ್ಶನ, ಮೆರವಣಿಗೆ ಮತ್ತು ಸಾರ್ವಜನಿಕ ಸಭೆಗಳನ್ನು ನಡೆಸಿದರು. ತಾ. 6ರಂದು ಪೂರ್ವಭಾವಿ ಪ್ರತಿನಿಧಿ ಸಭೆ ನಡೆದು ಐಕ್ಯತೆ ಕಾರ್ಯಕ್ರಮ ನಿರ್ಧರಿಸಲಾಯಿತು. ತಾ. 9ರಂದು ಕಾರ್ಮಿಕರು ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿಗಳ ಕಚೇರಿಮುಂದೆ ಮತಪ್ರದರ್ಶನಮಾಡಿ, ಮುಷ್ಕರ ನಿಷೇಧ ಕಾನೂನನ್ನು ಸರಕಾರ ಕೂಡಲೇ ವಾಪಸ್‌ಮಾಡಿಕೊಳ್ಳಬೇಕೆಂದೂ, ಸಿ. ಐ. ಟಿ. ಯು. ಅಧ್ಯಕ್ಷರಾದ ಕಾಂ. ಸೂರ್ಯನಾರಾಯಣ ರಾಯರನ್ನು ಹದ್ದುಪಾರು ಮಾಡುವ ಹುಕುಮನ್ನು ರದ್ದುಪಡಿಸಬೇಕೆಂದೂ ಚಿಕ್ಕಮಗಳೂರು ಜಿಲ್ಲೆಯ ಸೀಸೆ ಟೀ ತೋಟದ ಕಾರ್ಮಿಕರ ಮೇಲೆ ಪೋಲೀಸರ ದಬ್ಬಾಳಿಕೆ ಖಂಡಿಸಿ, ಅವರ ಬೇಡಿಕೆ ಕೂಡಲೇ ಮಂಜೂರು ಮಾಡಬೇಕೆಂದೂ, ಕಾರ್ಮಿಕರ ಮುಷ್ಕರ ನಡೆಯುವಾಗ ಪೋಲೀಸರು ಮಾಲಕರ ಪರವಾಗಿ ವರ್ತಿಸಿ ಕಾರ್ಮಿಕರನ್ನು ದಮನ ಮಾಡುವುದನ್ನು ನಿಲ್ಲಿಸಬೇಕೆಂದೂ, ಬಾಗಲಕೋಟೆ ನೂಲಿನ ಗಿರಣಿ ಕಾರ್ಮಿಕರ ಬೇಡಿಕೆಯನ್ನು ಕೂಡಲೇ ಇತ್ಯರ್ಥ ಮಾಡಬೇಕೆಂದೂ ಕೇಳಿಕೊಳ್ಳುವ ಮನವಿಯನ್ನು ಜಿಲ್ಲಾಧಿಕಾರಿಗಳ ಮುಖಾಂತರ ಮುಖ್ಯಮಂತ್ರಿ ಮತ್ತು ಕಾರ್ಮಿಕ ಮಂತ್ರಿಯವರಿಗೆ ಕಳಿಸಿಕೊಡಲಾಯಿತು. ಸಾಯಂಕಾಲ ಎನ್. ಕೆ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಎಲ್. ಬಿ. ಲಾಯದಗುಂದಿ, ಚಂಚಲಕರ, ಬಾಬುರೆಡ್ಡಿ ತಂಗಳ ಮೊದಲಾದವರು ಭಾಷಣ ಮಾಡಿ ಸರಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿದರು. ಈ ಕಾರ್ಯಕ್ರಮ ಯಶಸ್ವಿಗಾಗಿ ಪಿಸ್ಟಲ ಸೊನ್ನದ, ಜಿಕ್ಕಿಯಾಸಾಬ ಕಾಲೇಬಾಗ ಮೊದಲಾದ ಮುಖಂಡರು ಹೆಚ್ಚು ಶ್ರಮವಹಿಸಿದ್ದರು.

ಬಾಗಲಕೋಟೆ :

ಸಹಕಾರಿ ನೂಲಿನ ಗಿರಣಿ, ನಗರ ಸಭೆ ಮತ್ತಿನ್ನಿತರ ಕೆಲಸಗಾರರು ಮೆರವಣಿಗೆ ತೆಗೆದು ಅಸಿಸ್ಟೆಂಟ ಕಮೀಶನರಿಗೆ ಮನವಿಯನ್ನರ್ಪಿಸಿ, ಸಾರ್ವಜನಿಕ ಸಭೆಮಾಡಿ ಕರ್ನಾಟಕ ಸರಕಾರ ತರಬಯಸಿದ ಅತ್ಯಾವಶ್ಯಕ ಸೇವೆಗಳಲ್ಲಿಯ ಕಾರ್ಮಿಕರು ಮುಷ್ಕರ ಹೂಡುವುದನ್ನು ಪ್ರತಿಬಂಧಿಸುವ ಕಾಯಿದೆಯನ್ನು ವಿರೋಧಿಸಿದರು, ಡಿ. ಎಂ. ಖಲಾಸಿ, ನೂಲಿನಗಿರಣಿ ಕಾರ್ಮಿಕ ಸಂಘದ ಕಾರ್ಯದರ್ಶಿ ಕಾಂ. ಚಿಕಡಿ, ಪ್ರಕಾಶ ಹಿಟ್ಟಿನಳ್ಳಿ ಮೊದಲಾದವರು ಭಾಷಣಮಾಡಿದರು.

○

ಅಗತ್ಯ ಸೇವಾ ಮಸೂದೆ ವಿರುದ್ಧ ರಾಜ್ಯವ್ಯಾಪಿ ಹೋರಾಟದ ಯೋಜನೆ

ಜೂನ್ 10ರಂದು ಸಂಜೆ 6 ಗಂಟೆಗೆ ಟ್ರೇಡ್‌ಯೂನಿಯನ್ ಹಕ್ಕುಗಳ ಸಂರಕ್ಷಣ ಸಮಿತಿಯು ಸಭೆಸೇರಿ ಜೂನ್ 9ರ ಕಾರ್ಯಕ್ರಮವನ್ನು ಅವಲೋಕಿಸಿತು. ಸರಕಾರವು ಕಾರ್ಮಿಕ ವಿರೋಧಿ ಕ್ರಮಗಳನ್ನು ಕೈಬಿಡುವಂತೆ ಒತ್ತಾಯಿಸಲು ಜುಲ್ಯಾ ಕೊನೆಯಲ್ಲಿ ರಾಜ್ಯದಾದ್ಯಂತ ಮುಷ್ಕರ ನಡೆಸುವುದೆಂದೂ, ಇದಕ್ಕೆ ತಯಾರಿಯಾಗಿ ಜುಲ್ಯಾ 14ರಂದು ಬೆಂಗಳೂರಲ್ಲಿ ರಾಜ್ಯಮಟ್ಟದ ಸಮಾವೇಶವನ್ನು ನಡೆಸುವುದೆಂದೂ ನಿರ್ಣಯಿಸಲಾಯ್ತು, ನಗರದಲ್ಲಿ ಈಗಾಗಲೇ ರಚಿತವಾಗಿರುವ ಸಮಿತಿಯು ಸಮಾವೇಶದ ತಯ್ಯಾರಿ ಸಮಿತಿಯಾಗಿ ಕೆಲಸ ಮಾಡಲೂ ತೀರ್ಮಾನಿಸಲಾಗಿದೆ.

●

ನಾಗರಿಕರಿಂದ ಅಕ್ಕಿ ಆಲೂರು ಬಂದ್

ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕಿನ ಅಕ್ಕಿಆಲೂರಿಗೆ. ಬಹಳ ದಿನಗಳಿಂದ ಉರುವಲು ಕಟ್ಟಿಗೆ, ಕುಂಟದಿಂಡು ಮುಂತಾದ ರೈತೋಪಯೋಗಿ ಕಟ್ಟಿಗೆ ಸಾಮಾನುಗಳ ಕೊರತೆಯಿದೆ. ಇದನ್ನು ನಿವಾರಿಸಲು ಅರಣ್ಯಇಲಾಖೆಯವರು ಅಕ್ಕಿಆಲೂರಿನಲ್ಲಿ ಡಿಪೋ ತೆಗೆದು ಸರಬರಾಜು ಮಾಡುವಂತೆ ಒತ್ತಾಯಿಸಲು ಮತ್ತು ನಿರುದ್ಯೋಗಿ ಕೂಲಿಕಾರರು ತಲೆಹೊರೆಯಲ್ಲಿ ಒಣಕಟ್ಟಿಗೆಯನ್ನು ಆರಿಸಿ ತರುವಾಗ ಅರಣ್ಯಇಲಾಖೆಯವರು ಅಡ್ಡಿಪಡಿಸಕೂಡದೆಂದು ಒತ್ತಾಯಿಸಲು, ಹಾನಗಲ್ ತಾಲ್ಲೂಕು ರೈತಸಂಘದ ಕರೆಯ ಮೇರೆಗೆ 9-6-80ರಂದು ಅಕ್ಕಿಆಲೂರಿನಲ್ಲಿ ಯಶಸ್ವಿ ಬಂದ್ ಆಚರಿಸಲಾಯಿತು.

ಬಂದ್ ಕರೆಯ ಅಂಗವಾಗಿ ಜೋಡುಕುದುರೆಗಳೊಂದಿಗೆ ನೂರಾರು ಜನರು ಕೆಂಬಾವುಟದಡಿಯಲ್ಲಿ ಮೆರವಣಿಗೆ ನಡೆಸಿದರು. ೧ನೆ ಉರ್ದು ಸ್ಕೂಲಿನ ಮೈದಾನದಲ್ಲಿ ಬಹಿರಂಗ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಅಕ್ಕಿಆಲೂರಿನ ಹರಿಜನ ಮುಖಂಡ ಹೆಚ್. ಕೆ. ಗಾಮನಗಟ್ಟಿಯವರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ತಾಲ್ಲೂಕು ರೈತಸಂಘದ ಅಧ್ಯಕ್ಷ ಶ್ರೀ ಫಕೀರಪ್ಪ. ಎಂ. ಎಸ್. ಧಾರೇಶ್ವರ, ಹೆಚ್. ಎ ನಾಮಧಾರಿ, ಎಸ್. ಎಮ್. ಕನ್ನಗೌಡರ, ಜಿನ್ನಾಸಾಬ, ವ.ಶಾನದಾರ, ಹನುಮಂತಪ್ಪ, ಹುಸೇನಮಿಯಾ, ಸರಳೇಶ್ವರ, ಖಾದರಸಾಬ, ಬಾಳೂರ, ದ್ಯಾಮಣ್ಣತೋಡಿಕೊಪ್ಪ, ಬಶೀರಸಾಬ ಹಿತ್ತಲಮನಿ ಮುಂತಾದವರು ಮಾತನಾಡಿದರು.

○

ಕಾರ್ಮಿಕ ವಿರೋಧಿ ನೀತಿಗಳನ್ನು ಕೈಬಿಡಲು ಮನವಿ

ಕರ್ನಾಟಕ ರಾಜ್ಯಸರಕಾರದ ಅಗತ್ಯ ಸೇವಾಮಸೂದೆ, ಪೋಲೀಸ್ ಹಲ್ಲೆಗಳು, ಗಡೀಪಾರುಕ್ರಮ ಇವುಗಳನ್ನು ಖಂಡಿಸಿ, ಇಂಥ ಕಾರ್ಮಿಕ ವಿರೋಧಿ ಕ್ರಮಗಳನ್ನು ಕೈಬಿಡುವಂತೆ ಒತ್ತಾಯಿಸುವ ಮನವಿಯೊಂದನ್ನು ಚಿಕ್ಕಮಗಳೂರು ಜಿಲ್ಲಾ ಎ. ಐ. ಟಿ. ಯು. ಸಿ. ಮತ್ತು ಸಿ. ಐ. ಟಿ. ಯು. ಮತ್ತು ಕಾರ್ಮಿಕ ಸಂಘಗಳ ಸಮನ್ವಯ ಸಮಿತಿಯ ಪ್ರತಿನಿಧಿಗಳು ಚಿಕ್ಕಮಗಳೂರು ಜಿಲ್ಲಾಧಿಕಾರಿಯವರಿಗೆ ಅರ್ಪಿಸಿದರು. ಪ್ರತಿನಿಧಿಗಳಾಗಿ ಸಿ. ಐ. ಟಿ. ಯು. ನ ಎ. ಕೆ. ವಿಶ್ವನಾಥ್, ಎ. ಐ. ಟಿ. ಯು. ಸಿ ನ ಎಚ್. ಎಂ. ರೇಣುಕಾರಾಧ್ಯ ಮತ್ತು ಬಿ. ಎಲ್. ತೋಡಿನ್ನಾಯ ಅವರು ನೇತೃತ್ವವಹಿಸಿದ್ದರು.

○

ಕುಣಿಗಲ್‌ನಲ್ಲಿ ಬೃಹತ್ ಮೆರವಣಿಗೆ

ತಾರೀಖು 9-6-80 ರಂದು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಸಿ.ಐ ಟಿ.ಯು.ನವರಿಂದ ರೈತ-ಕಾರ್ಮಿಕರ ಭಾರಿ ಮೆರವಣಿಗೆಯು ಕಾಂ. ಒಡೇಸಾಬ್ ಮತ್ತು ಕಾಂ. ಎಸ್.ಜಿ ಯೂನೂಸ್‌ಖಾನ್‌ರವರ ನೇತೃತ್ವದಲ್ಲಿ ಹೊರಟು ಸರ್ಕಾರದ ಅಗತ್ಯ ಸೇವಾ ಮಸೂದೆಗೆ ಧಿಕ್ಕಾರ! ಕಾರ್ಮಿಕ ಮುಖಂಡರುಗಳಿಗೆ ಗಡೀಪಾರ್ ಆಜ್ಞೆ ವಿಧಿಸಿರುವ ಸರ್ಕಾರಕ್ಕೆ ಧಿಕ್ಕಾರ! ಎಂಬ ಘೋಷಣೆಗಳನ್ನು ಕೂಗುತ್ತಾ ಕೆಂಪುಬಾವುಟಗಳನ್ನು ಹಿಡಿದುಕೊಂಡು ತಾಲ್ಲೂಕು ಕಛೇರಿಯ ಮುಂದೆ ಸೇರಿತು. ನೆರೆದಿದ್ದ ಸಭೆಯನ್ನು ಉದ್ದೇಶಿಸಿ ತಾಲ್ಲೂಕ್ ರೈತಸಂಘದ ಕಾರ್ಯದರ್ಶಿ ಕಾಂ. ಬಿ.ಜಿ ಗಂಗಾಧರಯ್ಯನವರು ಮಾತನಾಡುತ್ತಾ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯನ್ನು ಖಂಡಿಸಿ, ರಾಜ್ಯದ ಸಿ ಐ. ಟಿ ಯು. ಅಧ್ಯಕ್ಷ ಕಾಂ. ಎಸ್. ಸೂರ್ಯನಾರಾಯಣ ರಾವ್, ಮತ್ತಿತರ ಮುಖಂಡರುಗಳ ಮೇಲೆ ಹೇರಿರುವ ಗಡೀಪಾರು ಆಜ್ಞೆಯನ್ನು ಸರಕಾರ ಕೂಡಲೇ ರದ್ದುಪಡಿಸಬೇಕೆಂದು ಒತ್ತಾಯಿಸಿದರು.

ತಾಲೋಕ್ ಕಾರ್ಮಿಕ ಮುಖಂಡ ಕಾಂ. ಅಂಜಪ್ಪನವರು ಮಾತನಾಡುತ್ತಾ ಬಹುರಾಷ್ಟ್ರೀಯ ಕಂಪನಿಗಳ ಮಾಲೀಕರುಗಳ ಪಿತೂರಿಯಿಂದ ಸರಕಾರ ಶಾಮೀಲಾಗಿ ಕಾರ್ಮಿಕ ಮುಖಂಡರುಗಳ ಮೇಲೆ ಗಡೀಪಾರು ಆಜ್ಞೆಯನ್ನು ವಿಧಿಸಿರುವ ಗುಂಡೂರಾವ್ ಸರ್ಕಾರವನ್ನು ಖಂಡಿಸಿದರು. ಕಾರ್ಮಿಕ ಮುಖಂಡರುಗಳ ಮೇಲಿನ ಗಡೀಪಾರು ಆಜ್ಞೆಯನ್ನು ಮತ್ತು ಜಾರಿಮಾಡಿರುವ ಅಗತ್ಯ ಸೇವಾ ಮಸೂದೆಯನ್ನು ರದ್ದುಪಡಿಸಿ, ಪೋಲೀಸ್ ಸೆಕ್ಷನ್ 55ರಿಂದ58ರವರೆಗಿನ ಖಾಲಂಗಳನ್ನು ತೆಗೆದುಹಾಕಬೇಕೆಂದೂ ಒತ್ತಾಯಿಸುತ್ತ ಈ ಬಗ್ಗೆ ಸರ್ಕಾರ ಉದಾಸೀನ ಮಾಡಿದ್ದೇ ಆದರೆ ರಾಜ್ಯಾದ್ಯಂತ ಹೋರಾಟವನ್ನು ಬಲಗೊಳಿಸಬೇಕಾಗುತ್ತೆ ಎಂದು ಎಚ್ಚರಿಸಿದರು. ನಂತರ ಕಾಂ. ಒಡೇಸಾಬ ಮತ್ತು ಕಾಂ. ಯೂನೂಸ್ ಖಾನ್‌ರವರು ತಹಶೀಲ್ದಾರ್‌ರವರಿಗೆ ಸಹಿಸಂಗ್ರಹಿಸಿದ್ದ ಬೇಡಿಕೆಗಳ ಮನವಿ ಪತ್ರವನ್ನು ಅರ್ಪಿಸಿದ ಮೇಲೆ ಮೆರವಣಿಗೆಯು ಸಿ. ಐ. ಟಿ. ಯು. ಆಫೀಸಿಗೆ ಹೋಗಿ ಸಭೆ ಮುಕ್ತಾಯವಾಯಿತು.

ಪ್ರಜಾಪ್ರಭುತ್ವ ಶಕ್ತಿಗಳು ಜಾಗೃತವಾಗಿರಲು ಕರೆ

"ಮತ್ತೆ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಇಂದಿರಾ ಕಾಂಗ್ರೆಸ್ ಪಕ್ಷಾಂತರಗಳ ಮೂಲಕವೂ, ಆಮೇಲೆ ಒಂಭತ್ತು ರಾಜ್ಯಗಳ ಅಸೆಂಬ್ಲಿಯನ್ನು ವಿಸರ್ಜಿಸಿ ಮತ್ತೆ ಚುನಾವಣೆ ನಡೆಸುವುದರ ಮೂಲಕವೂ ಎಲ್ಲಾ ರಾಜ್ಯಗಳಲ್ಲಿ ತನ್ನ ಅಧಿಕಾರವನ್ನು ಚಲಾಯಿಸಲು ಪ್ರಯತ್ನಿಸಿದೆ. ಈಗ ತ್ರಿಪುರಾ, ಪಶ್ಚಿಮ ಬಂಗಾಳ ಮತ್ತು ಕೇರಳ ರಾಜ್ಯಗಳ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿರುವ ಕಾಂಗ್ರೆ ಸರಕಾರವು ಕಾನೂನು ಮತ್ತು ವ್ಯವಸ್ಥೆಗಳ ಹೆಸರಲ್ಲಿ ಇಲ್ಲಿನ ಎಡ ಮತ್ತು ಎಡ ಪ್ರಜಾಪ್ರಭುತ್ವ ಸರಕಾರಗಳ ಮೇಲೆ ಗಧಾಪ್ರಹಾರ ಮಾಡಲು ಯೋಜಿಸುತ್ತಿದೆ. ಇತ್ತೀಚೆಗಿನ ಚುನಾವಣೆಗಳಲ್ಲಿ ರಾಷ್ಟ್ರಕ್ಕೆ ನಿಜವಾದ ಬದಲಿ ಮತ್ತು ಸರ್ವಾಧಿಕಾರ ಶಕ್ತಿಗಳಿಗೆ ಸವಾಲು ಕೊಡಲು ಸಾಧ್ಯವಿರುವುದು ಕಾರ್ಯಕ್ರಮದ ಆಧಾರಿತವಾಗಿಯೂ, ಹೋರಾಟಗಳ ಮೂಲಕವೂ ಬೆಳೆಯುವ ಎಡ ಪ್ರಜಾಪ್ರಭುತ್ವ ಕೂಟದಿಂದ ಮಾತ್ರ ಸಾಧ್ಯ ಎಂಬುದು ಸಾಬೀತಾಗಿದೆ. ಆದುದರಿಂದ ಇಂದಿರಾ ಕಾಂಗ್ರೆಸ್ಸಿನ ಸರ್ವಾಧಿಕಾರ ಕ್ರಮಗಳನ್ನು ವಿರೋಧಿಸುತ್ತಾ ನಿರ್ದಿಷ್ಟ ಆರ್ಥಿಕ-ಸಾಮಾಜಿಕ ಕಾರ್ಯಕ್ರಮಗಳ ಆಧಾರದಲ್ಲಿ ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಂದಾಗಲೂ, ಈಗಿಂದಲೇ ಜಾಗೃತರಾಗಿ ಶ್ರಮಿಸಲೂ" ಸಮಾಜ ವಿಜ್ಞಾನ ವೇದಿಕೆಯ ಆಶ್ರಯದಲ್ಲಿ 16-6-80ರಂದು ಸಂಜೆ ನಡೆದ ಸಭೆಯಲ್ಲಿ ಸಿ.ಪಿ.ಐ.(ಎಂ) ರಾಜ್ಯಸಮಿತಿ ಕಾರ್ಯದರ್ಶಿ ಕಾಂ, ಎಂ.ಕೆ. ಯವರು ಕರೆ ಇತ್ತರು. "ಅಸ್ಸಾಂ ಅಸ್ಸಾಮಿನವರಿಗೆ, ಕರ್ನಾಟಕ ಕನ್ನಡಿಗರಿಗೆ, ಮಹಾರಾಷ್ಟ್ರ ಮರಾಠಿಗಳಿಗೆ ಮಾತ್ರವೇ ಆದರೆ ಭಾರತ ದೇಶ ಯಾರಿಗೆ" ಎಂದು ಪ್ರಶ್ನಿಸಿದ ಎಂ. ಕೆ. ಯವರು ಅಸ್ಸಾಮಿನಲ್ಲಿರುವ ನಿರುದ್ಯೋಗ, ಬಡತನದಂತಹ ಸಮಸ್ಯೆಗೆ ಪರಿಹಾರವಿರುವುದು ಇಡೀ ದೇಶದಲ್ಲಿನ ಬಡತನ ಹೋಗಲಾಡಿಸಿ, ಎಲ್ಲರಿಗೂ ಉದ್ಯೋಗ ಕೊಡುವುದರಿಂದ ಮಾತ್ರವೇ ಸಾಧ್ಯ. ಇದು ಸಾಧ್ಯವಾಗಬೇಕಾದರೆ ಬಂಡವಾಳಶಾಹಿ ಪಥಕ್ಕೆ ಬದಲಾಗಿ ಸಮಾಜವಾದ ಪಥದತ್ತ ನಾವು ಮುನ್ನಡೆಯಬೇಕು. ಸಧ್ಯ ನಮ್ಮ ಆರ್ಥಿಕ-ಸಾಮಾಜಿಕ ಧೋರಣೆಗಳಲ್ಲಿ ತೀವ್ರವಾದ ಬದಲಾವಣೆಗಳನ್ನು ತಂದು ರಾಷ್ಟ್ರದ ಒಟ್ಟು ಪ್ರಗತಿಯನ್ನು ರಾಜ್ಯಗಳಿಗೆ ಹೆಚ್ಚು ಸ್ವಾಯತ್ತತೆ ಕೊಡುವುದರ ಮೂಲಕ ಸಾಧಿಸಬೇಕು ಎಂದ ಎಂ. ಕೆ. ಯವರು ಎಲ್ಲಾ ಪ್ರಗತಿಶೀಲ ಹಾಗೂ ವಿಚಾರವಂತರುಗಳು ಈ ದಿಸೆಯಲ್ಲಿ ಯೋಚಿಸಿ, ಒಂದಾಗಿ ಶ್ರಮಿಸಬೇಕಾಗಿದೆ ಎಂದರು,

●

ಸಂಪಾದಕರ ಮೇಲೆ ನಡೆದ ಹಲ್ಲೆಯ ಖಂಡನೆ

ಗುಲಬರ್ಗದಲ್ಲಿನ ಜನಪ್ರಿಯ ಹಾಗೂ ಪ್ರಗತಿಶೀಲ ವಾರಪತ್ರಿಕೆ 'ಬಸವ ಕ್ರಾಂತಿ'ಯ ಸಂಪಾದಕರಾದ ಶ್ರೀ ವಿ. ಶಿ. ಸ್ವಾಮಿ ಅವರ ಮೇಲೆ ಮಾಜಿ ಮಂತ್ರಿಯವರೊಬ್ಬರ ಬೆಂಬಲಿಗರೆನ್ನಲಾದವರಿಂದ ನಡೆದ ಹಲ್ಲೆಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ಖಂಡಿಸುತ್ತದೆ. ಪ್ರಜಾಪ್ರಭುತ್ವ ಮೌಲ್ಯಗಳನ್ನು ನಂಬುವವರೆಲ್ಲರೂ ಇಂತಹ ಕೃತ್ಯವನ್ನು ಖಂಡಿಸಬೇಕೆಂದೂ, ನಿರ್ಭೀತಿಯಿಂದ ವಾಸ್ತವಿಕತೆಯನ್ನು ಚಿತ್ರಿಸಲು ಪತ್ರಿಕೆಗಳಿಗೆ ಸ್ವಾತಂತ್ರ್ಯಕ್ಕಾಗಿ ಹೋರಾಡಲೂ ಸಿ ಪಿ ಐ (ಎಂ) ಕರೆ ಈಯುತ್ತದೆ.

○

ಕತ್ತಲ ಕೋಟೆಯಿಂದ..............ಬೆಳಕಿನ ಬೆಂಗಳೂರುವರೆಗೆ

ದಲಿತರ ಚರಿತ್ರಾರ್ಹ ಜಾತಾ

ನಾಡಿನ ಬಹುಪಾಲು ಹಳ್ಳಿಗರದು ಬೆಳಕಿಲ್ಲದ ಬದುಕು. ಕತ್ತಲ ಬದುಕನ್ನು ಸವೆಸಿಕೊಂಡು ಬಂದಿರುವ ಲಕ್ಷಾಂತರ ಹಳ್ಳಿಗಳಲ್ಲಿ ರಾಜ್ಯದ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೋಕಿನ ಹುಣಿಸೆಕೋಟೆಯೂ ಒಂದು. ಯಾವುದೇ ಬೆಳವಣಿಗೆ ಕಾಣದ ಈ ಕುಗ್ರಾಮದಲ್ಲಿ 150 ಸಂಸಾರಗಳಿವೆ. ಇವರೆಲ್ಲರೂ ವ್ಯವಸಾಯ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಇದೇ ಊರಿನಲ್ಲಿ ಹುಟ್ಟಿ ಬೆಳೆದ ಕುಂಬಾರ ಶೇಷಗಿರಿಯಪ್ಪ ತನ್ನ ವಂಶವೃತ್ತಿಯಾದ ಮಡಿಕೆ ಮಾಡುವುದರಿಂದ ತನ್ನ ಕುಟುಂಬ ಸಾಕಲಾರದೇಹೋದ. ಯಾವ ಹಳ್ಳಿಗೆ ಹೋದರೂ ನಾವೀಗ ಪ್ಲಾಸ್ಟಿಕ್ಕಿನ ಬಿಂದಿಗೆ, ಚೊಂಬು ಮುಂತಾದ ಮನೆಬಳಕೆಯ ವಸ್ತುಗಳನ್ನು ನೋಡುತ್ತೇವೆ. ಬೆಳೆದು ಬರುತ್ತಿರುವ ಬಂಡವಾಳ ವ್ಯವಸ್ಥೆ ಕುಂಬಾರ ಶೇಷಗಿರಿಯಪ್ಪನ ಗುಡಿಕೈಗಾರಿಕೆಯನ್ನು ಮುಂಗಿಹಾಕಿತು. ತನ್ನ ಸಂಸಾರ ನಿರ್ವಹಣೆಗಾಗಿ ಎರಡು ಎಕರೆ ಭೂಮಿಯನ್ನು ಆಶ್ರಯಿಸಬೇಕಾಯಿತು ಶೇಷಗಿರಿಯಪ್ಪನಿಗೆ. ಹೊಟ್ಟೆಬಟ್ಟೆ ಕಟ್ಟಿ ಕೂಡಿಸಿಟ್ಟಿದ್ದ ಪುಡಿಗಾಸಿನಿಂದ ಮತ್ತು ಸ್ವಲ್ಪ ಸಾಲಮಾಡಿ ತಂದ ಹಣದಿಂದ ಎರಡೆಕರೆ ಭೂಮಿಯನ್ನು ಖರೀದಿಸಿ ರಿಜಿಸ್ಟರ್ ಮಾಡಿಸಿಕೊಂಡು ಶೇಷಗಿರಿಯಪ್ಪ ರೈತನಾದ. ಜೊತೆಗೆ ತನ್ನ ಕುಲಕಸಬನ್ನೂ ಸ್ವಲ್ಪ ಪ್ರಮಾಣದಲ್ಲಿ ಮುಂದುವರೆಸಿದ.

ಭೂಶಾಸನವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದು; ಬಡರೈತರಿಗೆ-ಗೇಣಿದಾರರಿಗೆ ಪರಿಹಾರ ಕೊಟ್ಟಿದ್ದೇವೆಂದು ಸಾರುತ್ತಿರುವ ಕಾಂಗ್ರೈವ ಸರ್ಕಾರವಿರುವ ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಮಾಲೂರು ತಾಲ್ಲೋಕಿನ ಹುಣಿಸೇಕೋಟೆ ಗ್ರಾಮದಲ್ಲಿ ಕೃಷ್ಣೇಗೌಡನೆಂಬ ಜಮೀನ್ದಾರನಿಗೆ ಅದು ಹೇಗೋ ಏನೋ 500 ಎಕರೆ ಜಮೀನಿರುವುದು ಸತ್ಯ. ಈತ ಹಿಂದೆ ಅರಸು ಕಾಂಗ್ರೆಸ್ ಪಕ್ಷದಲ್ಲಿದ್ದವನು. ಈಗ ಕಾಂಗ್ರೈನಲ್ಲಿದ್ದಾನೆ. ಮಾಲೂರು ತಾಲ್ಲೋಕಿನ ತಾಲ್ಲೋಕ್‌ಬೋರ್ಡ್‌ನ ಪ್ರಸ್ತುತ ಅಧ್ಯಕ್ಷ ಈ ಕೃಷ್ಣೇಗೌಡ. ಈತನದ್ದು ಕೊಲೆಗಳ ಇತಿಹಾಸವೇ ಇದೆ ಎಂದು ಹುಣಿಸೆಕೋಟೆಯ ಜನರೇ ನನ್ನಲ್ಲಿ ಹೇಳಿಕೊಂಡರು. ಈತನು ಇಟ್ಟುಕೊಂಡಿರುವ ಕೆಂಚಮ್ಮ ಎಂಬಾಕೆಗೆ ಒಂದಷ್ಟು ಭೂಮಿ ಮಾಡಿಸಿಕೊಡಬೇಕು ಎಂಬುದು ಇವನ ಆಸೆ. ಕುಂಬಾರ ಶೇಷಗಿರಿಯಪ್ಪನು ಖರೀದಿಸಿದ್ದ ಜಮೀನಿನ ಪಕ್ಕದಲೇ ಕೆಂಚಮ್ಮನ ಜಮೀನಿದೆ. ಇದರಿಂದಾಗಿ ಬಂತು ಶೇಷಗಿರಿಯಪ್ಪನಿಗೆ ಕೇಡುಗಾಲ. ತನ್ನೆರಡು ಎಕರೆ ಜಮೀನನ್ನು ಕೆಂಚಮ್ಮನಿಗೆ ಬಿಟ್ಟುಕೊಡುವಂತೆ ಜಮೀನ್ದಾರ್ ಕೃಷ್ಣೇಗೌಡ ಕುಂಬಾರ ಶೇಷಗಿರಿಯಪ್ಪನನ್ನು ಕೇಳಿದ. ತನ್ನ ಸಂಸಾರಕ್ಕೆ ಅಗತ್ಯ ಆಧಾರವಾಗಿದ್ದ ಎರಡೆಕರೆ ಭೂಮಿಯನ್ನು ಬಿಟ್ಟುಕೊಡುವುದಿಲ್ಲ ಎಂದು ಮಾತ್ರ ಹೇಳಲಿಲ್ಲ ಶೇಷಗಿರಿಯಪ್ಪ. 'ತಾವು 500 ಎಕರೆ ಜಮೀನ್ದಾರರು, ತಾಲ್ಲೋಕ್‌ಬೋರ್ಡ್ ಅಧ್ಯಕ್ಷರು. ಮೇಲಾಗಿ ದೇವರಾಜ ಅರಸರೇ ನಿಮ್ಮ ಮನೆಗೆ ಬಂದು ಹೋಗುತ್ತಾರೆ. ಇಷ್ಟು ದೊಡ್ಡ ಜನರಾದ ತಾವು ಆ ಕೆಂಚಮ್ಮನಿಗೆ ನಿಮ್ಮ ಜಮೀನಿನಲ್ಲೇ ಎರಡು ಎಕರೆಯನ್ನು ಅಥವ ದರಕಾಸ್ತಿನಲ್ಲಿ ನಾಲ್ಕೆಕರೆಯನ್ನೋ ಕೊಡಿಸಿಕೊಡಿ' ಎಂದೂ ಭಿನ್ನವಿಸಿಕೊಂಡ ಶೇಷಗಿರಿಯಪ್ಪ. ತನ್ನಂತಹ ಒಬ್ಬ ದೊಡ್ಡ ಮನುಷ್ಯನ ಮಾತಿಗೆ ಒಬ್ಬ ಯಂತ್ರೇಟ್ ಕುಂಬಾರ ಬೆಲೆಕೊಡಲಿಲ್ಲವಲ್ಲ ಎಂಬ ಅಹಂ ಮತ್ತು 500 ಎಕರೆ ಜಮೀನು ಹಾಗೂ ತಾಲ್ಲೋಕ್‌ಬೋರ್ಡ್ ಅಧ್ಯಕ್ಷಗಿರಿಯ ಅಧಿಕಾರ ಕೃಷ್ಣೇಗೌಡನಲ್ಲಿ ಕೆಲಸಮಾಡಲು ಆರಂಭಿಸಿತು. ಕುಂಬಾರ



ನ್ಯಾಯ ಕೇಳಿ 70 ಕಿ.ಮಿ. ಕಾಲ್ನಡಿಗೆಯಲ್ಲಿ ನಡೆದ ದಲಿತರ ಜಾತ

ಮುಂಭಾಗದಲ್ಲಿ ಕೊಲೆಗೀಡಾದ ಶೇಷಗಿರಿಯಪ್ಪನ ಮಗಳು ಅನುಸೂಯಮ್ಮ ಪಂಜನ್ನು ಹಿಡಿದು ಬರುತ್ತಿರುವುದು

ಶೇಷಗಿರಿಯಪ್ಪನಿಗೆ ಕಿರುಕುಳ ಶುರುವಾಯಿತು. ವರ್ಷವೊಂದಕ್ಕೆ 65 ಪೈಸೆಗಳಷ್ಟು ಗ್ರಾಮಪಂಚಾಯಿತಿಗೆ ಕಂದಾಯ ಕಟ್ಟಿ ಉಳಿಸಿಕೊಂಡಿದ್ದ ಶೇಷಗಿರಿಯಪ್ಪನ ಮಡಿಕೆ ಸುಡುವ ಗೂಡನ್ನು ತೆಗೆಯಬೇಕೆಂದು ತಾಲ್ಲೋಕಿನ ಸರ್ಕಾರಿ ಅಧಿಕಾರಿಗಳಿಂದ ಶೇಷಗಿರಿಯಪ್ಪನಿಗೆ ನೋಟೀಸು ಬಂದಿತು. ಇದರ ಜೊತೆಗೆ ಗ್ರಾಮಪಂಚಾಯಿತಿಯ ಛೇರ್ಮನ್ ಆಗಿರುವ ಕೃಷ್ಣೇಗೌಡನ ತಮ್ಮ ವೆಂಕಟೇಶನಿಂದಲೂ ಗೂಡು ತೆಗೆಯುವಂತೆ ಒಂದು ನೋಟೀಸು ಬಂತು. ನೋಟೀಸಿನಲ್ಲಿ ಅವರು ಕೊಟ್ಟಿದ್ದ ಕಾರಣ ಗೂಡು ಅಕ್ರಮವಾಗಿ ಕಟ್ಟಲ್ಪಟ್ಟಿದೆಯೆಂತಲೂ ಮತ್ತು ಮಡಿಕೆ ಸುಡುವ ಈ ಗೂಡು ಊರಿನ ಸೌಂದರ್ಯವನ್ನು ಹಾಳು ಮಾಡುತ್ತದೆ ಎಂತಲೂ ಆಗಿತ್ತು. ನೋಟೀಸ್ ಇತ್ತ ಏಳು ದಿವಸಗಳ ನಂತರವೂ ಗೂಡುತೆಗೆಯದಿದ್ದ ಶೇಷಗಿರಿಯಪ್ಪನ ಧೈರ್ಯ ಜಮೀನ್ದಾರ್ ಕೃಷ್ಣೇಗೌಡನ ಅಹಂ ಅನ್ನು ಮತ್ತೆ ಕೆಣಕಿತು. ತನ್ನ ಅಣ್ಣತಮ್ಮಂದಿರು ಮತ್ತು ತಾನು ಸಾಕಿದವರ ಜೊತೆಗೂಡಿ ಬಂದ ಕೃಷ್ಣೇಗೌಡ ಶೇಷಗಿರಿಯಪ್ಪನ ಮಡಿಕೆ ಗೂಡನ್ನು ಕೆಡವಿದರು. ತಡೆಯಲು ಹೋದ ಶೇಷಗಿರಿಯಪ್ಪ ಮತ್ತು ಆತನ ಸಂಸಾರದವರು ಘರ್ಷಣೆಯಲ್ಲಿ ಗಾಯಗೊಂಡರು. ಶೇಷಗಿರಿಯಪ್ಪ ಪೋಲೀಸ್ ಠಾಣೆಗೆ ದೂರಿತ್ತ. ಪೋಲೀಸರಿಂದ ಯಾವ ರಕ್ಷಣೆಯೂ ದೊರೆಯಲಿಲ್ಲ ಮತ್ತು ಆಕ್ರಮಣ ಮಾಡಿದ ಅಪರಾಧಿಗಳ ಮೇಲೆ ಏನೂ ಕ್ರಮಕೈಗೊಳ್ಳಲಿಲ್ಲ.

ಮಗಳ ಮಾನಭಂಗ:

ತಾಳಿಕಟ್ಟಿಸಿಕೊಂಡ ತಾರುಣ್ಯದಲ್ಲಿಯೇ ಗಂಡನನ್ನು ಕಳೆದುಕೊಂಡ ನತದೃಷ್ಟೆ ಮಗಳು ಅನುಸೂಯಮ್ಮ ತನ್ನ ಬದುಕಿಗಾಗಿ ತಂದೆ ಶೇಷಗಿರಿಯಪ್ಪನನ್ನೇ ಆಶ್ರಯಿಸಿದ್ದಳು. ಹತ್ತೊಂಭತ್ತರ ಹರೆಯದ ಈಕೆ ಸೀಬೇ ತೋಟವನ್ನು ಕಳ್ಳರಿಂದ, ಕೋತಿಗಳಿಂದ ರಕ್ಷಿಸುವ ಕೆಲಸಮಾಡುತ್ತಿದ್ದಳು. ಕೃಷ್ಣೇಗೌಡ ಮತ್ತು ಆತನ ಕಪಿಸೈನ್ಯದಿಂದ ಒಂದು ದಿನ ಸೀಬೇ ತೋಟದಲ್ಲಿ ಈಕೆಯ ಶೀಲಭಂಗವಾಯಿತು. ನಿಶ್ಶಕ್ತ ಶೇಷಗಿರಿಯಪ್ಪ ಮತ್ತೆ ಪೋಲೀಸ್ ಠಾಣೆಗೆ ದೂರಿತ್ತ. ತನ್ನ ಹಿಂದಿನ ದೂರಿಗೆ ಯಾವ ಉಪಯೋಗವನ್ನೂ ಕಾಣದಿದ್ದ ಶೇಷಗಿರಿಯಪ್ಪ ಐ. ಜಿ. ಪಿ. ದರ್ಜೆಯ ಮೇಲಧಿಕಾರಿಗಳವರೆಗೆ, ಮಂತ್ರಿ ಮಾನ್ಯರುಗಳಿಗೆ ತನ್ನ ಸಂಸಾರದ ಮೇಲಾಗುತ್ತಿರುವ ಸತತ ಹಲ್ಲೆಗಳನ್ನು ಬರೆದು ಹೇಳಿಕೊಂಡ. ಪ್ರಾಣರಕ್ಷಣೆಗಾಗಿ ರಾಜ್ಯಸರ್ಕಾರವನ್ನು ಅಂಗಲಾಚಿದ.

ಸಂಘಟನೆಗಳು ಹಳ್ಳಿಗೆ:

ಮಾಲೂರು ತಾಲ್ಲೋಕಿನ ತಾಲ್ಲೋಕ್‌ಬೋರ್ಡ್ ಅಧ್ಯಕ್ಷ ಹಾಗೂ ಸ್ಥಳೀಯ ಇಂದಿರಾ ಕಾಂಗ್ರೆಸ್ ಪಕ್ಷದ ಮುಖಂಡ ಕೃಷ್ಣೇಗೌಡನ ಜನಹಿತ ಕೆಲಸಗಳು ಸ್ಥಳೀಯ ಪತ್ರಿಕೆಗಳಲ್ಲಿ ಮತ್ತು ರಾಜ್ಯಮಟ್ಟದ ಪತ್ರಿಕೆಗಳಲ್ಲಿ ಬರಲಾರಂಭಿಸಿದವು. ತಮ್ಮ ಜನರ ಮೇಲೆ ಆಗುತ್ತಿರುವ ಹಲ್ಲೆ-ಅನ್ಯಾಯಗಳನ್ನು ಪ್ರತಿಭಟಿಸಲು ಕೋಲಾರ ಜಿಲ್ಲಾ ದಲಿತ ಸಂಘರ್ಷ ಸಮಿತಿ ಮುಂದಾಯಿತು. ಇದರ ಜೊತೆಗೆ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯೂ ಸೇರಿಕೊಂಡಿತು. ಎರಡೂ ಸಂಘಟನೆಗಳು ಮಾಲೂರಿನಲ್ಲಿ ಪ್ರತಿಭಟನಾ ಮೆರವಣಿಗೆಯನ್ನು ನಡೆಸಿದರು. ಜಮೀನ್ದಾರ್ ಕೃಷ್ಣೇಗೌಡನ ಕ್ರೌರ್ಯಗಳನ್ನು ಮಾಲೂರಿನ ಮಹಾಜನತೆಗೆ ಕೂಗಿಕೂಗಿ ಹೇಳಿದರು. ಕೃಷ್ಣೇಗೌಡನ ಕೋಪ ಮತ್ತಷ್ಟು ಕೆರಳಿತು. ಕಳೆದ ಮಾರ್ಚ್ ಮುವ್ವತ್ತರ ಕತ್ತಲಿನಲ್ಲಿ ಜಮೀನ್ದಾರರ ಕಡೆಯವರಿಂದ ಕೊಲ್ಲಲ್ಪಟ್ಟ ಕುಂಬಾರ ಶೇಷಗಿರಿಯಪ್ಪನ ಹೆಣ ಹೆದ್ದಾರಿಯಲ್ಲಿ ಬಿದ್ದಿತ್ತು. ಶೇಷಗಿರಿಯಪ್ಪನವರ ಸಂಸಾರದವರ ಕೈಕಾಲುಗಳು ಕತ್ತರಿಸಲ್ಪಟ್ಟು ಆಸ್ಪತ್ರೆಗೆ ದಾಖಲಾದರು.

ರಾಜ್ಯದ ಎಲ್ಲ ಪತ್ರಿಕೆಗಳಲ್ಲಿ ಶೇಷಗಿರಿಯಪ್ಪನ ಕೊಲೆಯ ಕುರಿತು ಚಿತ್ರಸಹಿತ ಸುದ್ದಿಗಳು ಅಚ್ಚಾದವು. ಪೋಲೀಸರು ಖೂರನನ್ನು ಬಂಧಿಸಿದ ಸುದ್ದಿಯನ್ನು ಜನತೆ ಓದಲಿಲ್ಲ. ಆದರೆ ಕೊಲೆ ಕೃತ್ಯದ ಮುಖ್ಯ ಆರೋಪಿ ಕೃಷ್ಣೇಗೌಡನಿಗೆ ಕೋರ್ಟಿನಿಂದ ಮುಂಜಾಗರೂಕತಾ ಜಾಮೀನು ಸಿಕ್ಕ ಸುದ್ದಿಯನ್ನು ಜನ ಓದಿದರು.

ಅಂಬೇಡ್ಕರ್ ದಿನ - ದಬ್ಬಾಳಿಕೆ ವಿರೋಧಿದಿನ:

ದಲಿತ ಜನತೆಗಾದ ಈ ಮಹದನ್ಯಾಯವನ್ನು ಪ್ರತಿಭಟಿಸಲು ರಾಜ್ಯ ದಲಿತ ಸಂಘರ್ಷ ಸಮಿತಿಯು; ಕಪ್ಪು ಜನರ ಮೊಟ್ಟಮೊದಲ ನಾಯಕನಾದ ದಿ ಅಂಬೇಡ್ಕರ್ ಅವರ ಜನ್ಮದಿನೋತ್ಸವವನ್ನು ಆಯ್ಕೆಮಾಡಿತು. ಕಳೆದ ಏಪ್ರಿಲ್ 14ರಂದು ರಾಜ್ಯದ ರಾಜಧಾನಿಯೂ ಸೇರಿದಂತೆ ನೂರಾರು ನಗರ-ಪಟ್ಟಣ ಮತ್ತು ಹಳ್ಳಿಗಳಲ್ಲಿ ದಬ್ಬಾಳಿಕೆ ವಿರೋಧಿ ದಿನವನ್ನು ಆಚರಿಸಲಾಯಿತು. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ, ಭಾರತ ಕಮ್ಯೂನಿಸ್ಟ್ ಪಕ್ಷ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಸಮುದಾಯ, ಎಸ್. ಎಫ್. ಐ., ಎ. ಐ. ಎಸ್. ಎಫ್. ಹಿಂದಿನ ಸಮಾಜವಾದಿ ಪಕ್ಷದ ಕೆಲವು ಗೆಳೆಯರು ಈ ದಬ್ಬಾಳಿಕೆ ವಿರೋಧಿ ದಿನದಲ್ಲಿ ಪಾಲ್ಗೊಂಡಿದ್ದರು. ನೊಂದವರಿಗೆ ನ್ಯಾಯ ದೊರಕಿಸುವಂತೆ, ತಪ್ಪಿತಸ್ಥರ ಮೇಲೆ ಕ್ರಮಕೈಗೊಳ್ಳುವಂತೆ ರಾಜ್ಯದ ಎಲ್ಲಾ ಕಡೆಗಳಿಂದ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಲಾಯಿತು.

ಐದು ಸಾವಿರ ರೂ. ಪರಿಹಾರ:

ಇಷ್ಟೊಂದು ಪ್ರಬಲ ಒತ್ತಾಯ ಬಂದಮೇಲೆ ರಾಜ್ಯಸರ್ಕಾರವು ಶೇಷಗಿರಿಯಪ್ಪನ ಸಂಸಾರಕ್ಕೆ ಐದು ಸಾವಿರ ರೂ. ಪರಿಹಾರ ಧನವನ್ನು ಮಂಜೂರು ಮಾಡಿದ ಸುದ್ದಿಯನ್ನು ಪತ್ರಿಕೆಗಳು ಪ್ರಕಟಿಸಿದವು. ತಪ್ಪಿತಸ್ಥರ ಮೇಲೆ ಯಾವ ಕ್ರಮಗಳನ್ನು ಸರ್ಕಾರ ತೆಗೆದುಕೊಂಡಿತು ಎಂಬ ಸುದ್ದಿಯನ್ನಾದರೂ ಓದಲಿಲ್ಲ.

ಕಾಲ್ನಡಿಗೆಯ ಜಾತ:

ಸಿರಿವಂತರಿಂದ ಕೊಲ್ಲಲ್ಪಟ್ಟ ಕುಂಬಾರ ಶೇಷಗಿರಿಯಪ್ಪನ ಸಂಸಾರಕ್ಕೆ ಸರ್ಕಾರವು ಬಡಜನತೆಯ ತೆರಿಗೆಯಿಂದ ಕೊಟ್ಟ ಪರಿಹಾರ ಧನವು ದಲಿತ ಸಂಘರ್ಷ ಸಮಿತಿಗೆ ಸಮಾಧಾನ ತರಲಿಲ್ಲ. ಇವರು ಕೇಳಿದ್ದು ನ್ಯಾಯ. ಸರ್ಕಾರ ಕೊಟ್ಟದ್ದು ಭಿಕ್ಷೆ. ಅದೂ ಬಡಜನತೆಯ ಬೆವರಿನಿಂದ ಬಂದದ್ದು. ನ್ಯಾಯ ದಕ್ಕಿಸಿಕೊಳ್ಳಲು ಜನತೆಯನ್ನು ಸಿದ್ಧಮಾಡಲು ರಾಜ್ಯ ದಲಿತ ಸಂಘರ್ಷ ಸಮಿತಿಯವರು ಹುಣಿಸೆಕೋಟೆಯಿಂದ ಬೆಂಗಳೂರ ನಗರಕ್ಕೆ ಕಾಲ್ನಡಿಗೆಯ ಜಾತ ವ್ಯವಸ್ಥೆ ಮಾಡಿದರು. ಕಪ್ಪು ಜನರ ಮೊಟ್ಟಮೊದಲ ನಿಜವಾದ ಸಂಘಟನೆಯ ಕರೆಗೆ ರಾಜ್ಯಾದ್ಯಂತ ಇನ್ನೂರು ಜನರು ಹುಣಿಸೆಕೋಟೆಗೆ ಜೂನ್ 9ರಂದು ಬಂದರು. [ಬೆಂಗಳೂರಿನ ಒಬ್ಬ ಪೋಲೀಸ್ ಅಧಿಕಾರಿಯ ಮಾತನ್ನೇ ಉದ್ಧರಿಸಿದರೆ....all these black people are youngsters-ಈ ಎಲ್ಲ ಕಪ್ಪು ಜನರೂ ಯುವಜನರೇ ಆಗಿದ್ದಾರೆ]

ಸ್ಮಶಾನಮೌನ:

ಚರಿತ್ರಾರ್ಹ ಜಾತವನ್ನು ವರದಿ ಮಾಡಲು ಹೋದ ನಾನು ಹುಣಿಸೆಕೋಟೆಯ ಹಳ್ಳಿಗರನ್ನು ಮಾತನಾಡಿಸಲು ಪ್ರಯತ್ನಿಸಿ ವಿಫಲನಾದೆ. ಇಡೀ ಊರನ್ನು ಸ್ಮಶಾನ ಮೌನ ಆವರಿಸಿತ್ತು.

(7ನೇ ಪುಟ ನೋಡಿ)

ಆಧುನಿಕ ರಾಜಕೀಯ ಬೆಳವಣಿಗೆಯಲ್ಲಿ ಜಾತಿ, ವರ್ಗ ಮತ್ತು ಪಕ್ಷಗಳು

"ಸಾಧಾರಣವಾಗಿ ಗುಲಾಮ ಪದ್ಧತಿ ಮತ್ತು ಅಂತಹ ವಿಚಾರಗಳ ಬಗ್ಗೆ ಆಕ್ಷೇಪಣೆ ಎತ್ತಿ, ಅವುಗಳ ಬಗ್ಗೆ ನೈತಿಕ ತಿರಸ್ಕಾರ, ಕೋಪಗಳನ್ನು ವ್ಯಕ್ತಪಡಿಸುವುದು ಸುಲಭ, ಆದರೆ ದುರಾದೃಷ್ಟದಿಂದ, ಇದರಿಂದ ತಿಳಿದುಬರುವುದು ಎಲ್ಲರಿಗೂ ಗೊತ್ತಿರುವ ವಿಚಾರವೇ. ಎಂದರೆ ಈ ಪ್ರಾಚೀನ ಸಂಸ್ಥೆಗಳು ಸೂಚಿಸುವ ವಿಚಾರಗಳು ನಮ್ಮ ಪ್ರಸ್ತುತ ಸಂದರ್ಭಗಳಿಗೆ, ಭಾವನೆಗಳಿಗೆ ಒಂದಿಷ್ಟೂ ಹೊಂದಿಕೊಳ್ಳುವುದಿಲ್ಲ ಎಂಬುದು; ಆದರೆ ಈ ಸಂಸ್ಥೆಗಳು ಹೇಗೆ ಉದ್ಭವವಾದವು, ಯಾಕೆ ಅಸ್ತಿತ್ವದಲ್ಲಿದ್ದವು, ಚರಿತ್ರೆಯಲ್ಲಿ ಅದು ವಹಿಸಿದ ಪಾತ್ರವೇನು ಎಂಬುದರ ಬಗ್ಗೆ ಇದು ಒಂದು ಮಾತನ್ನೂ ಹೇಳುವುದಿಲ್ಲ. ಆದರೆ ನಾವು ಈ ಪ್ರಶ್ನೆಗಳನ್ನು ಪರಿಶೀಲಿಸಿದಾಗ, ಎಷ್ಟೇ ವಿರೋಧಾಭಾಸ, ಅಸಂಪ್ರದಾಯಿಕ ಎನಿಸಿದರೂ ಒಂದು ಮಾತನ್ನು ಹೇಳಲೇಬೇಕಾಗುತ್ತದೆ. ಆ ಕಾಲದಲ್ಲಿ ಇದ್ದ ಪರಿಸ್ಥಿತಿಯೊಳಗೆ ಗುಲಾಮ ಪದ್ಧತಿ ನಿಜಕ್ಕೂ ಒಂದು ಮುನ್ನಡೆಯೇ ಆಗಿತ್ತು. ಏಕೆಂದರೆ ಪ್ರಾಣಿಗಳಿಂದ ಮಾನವನ ಬೆಳವಣಿಗೆ ಆಗಿದ್ದು, ಬರ್ಬರತೆಯಿಂದ ತಪ್ಪಿಸಿಕೊಳ್ಳಲು ಮಾನವನ ಬರ್ಬರವಾದ ಮತ್ತು ಹೆಚ್ಚು ಕಡಿಮೆ ಪ್ರಾಣಿಸಮಾನವಾದ ಸಾಧನೆಗಳನ್ನು ಉಪಯೋಗಿಸಬೇಕಾಗಿತ್ತು. ಇಂಡಿಯಾದಿಂದ ರಷ್ಯಾದವರೆಗೆ ಎಲ್ಲೆಲ್ಲಿ ಪ್ರಾಚೀನ ಬಣಗಳು ಅಸ್ತಿತ್ವದಲ್ಲಿದ್ದವೋ ಅಲ್ಲೆಲ್ಲಾ ಸಹಸ್ರಾರು ವರ್ಷಗಳವರೆಗೆ ಅವರು ತೀರ ಕ್ರೂರ ಸ್ವರೂಪದ ರಾಜ್ಯಶಕ್ತಿ; ಪ್ರಾಚೀನ ರೂಪದ ಆಳ್ವಿಕೆ ಇವುಗಳನ್ನು ರೂಪಿಸಿಕೊಂಡರು. ಇಂತಹ ಬಣಗಳು ಎಲ್ಲಿ ನಾಶವಾಯಿತೋ ಅಂತಹ ಕಡೆ ಜನಗಳು ತಾವೇ ಅಭಿವೃದ್ಧಿಹೊಂದಿ, ಗುಲಾಮರ ದುಡಿಮೆಯ ಮೂಲಕ ಅವರ ಉತ್ಪಾದನೆ ಹೆಚ್ಚಾಗಿ ಮತ್ತು ಅಭಿವೃದ್ಧಿಯಾಗಿ ಅವರ ಆರ್ಥಿಕ ಮುನ್ನಡೆ ಸಾಧ್ಯವಾಯಿತು. ಎಲ್ಲಿಯವರೆಗೆ ಮಾನವನ ದುಡಿಮೆಶಕ್ತಿ ಅಲ್ಪ ಉತ್ಪಾದನೆ ಮಾಡುವಷ್ಟಿತ್ತೋ ಅಲ್ಲಿಯವರೆಗೆ ಅದು ಅಸ್ತಿತ್ವಕ್ಕೆ ಅಗತ್ಯವಾದುದಕ್ಕಿಂತ ತುಸುವೇ ಹೆಚ್ಚಳವನ್ನು ಒದಗಿಸುತ್ತಿತ್ತು. ಉತ್ಪಾದನಾಶಕ್ತಿಯಲ್ಲಿ ಹೆಚ್ಚಳ, ವ್ಯಾಪಾರದ ವಿಸ್ತರಣೆ, ರಾಜ್ಯ ಮತ್ತು ಕಾನೂನುಗಳ ಬೆಳವಣಿಗೆ, ಕಲೆ ಮತ್ತು ವಿಜ್ಞಾನಕ್ಕೆ ಅಡಿಪಾಯ ಇವೆಲ್ಲವೂ ಶ್ರಮವಿಭಜನೆ ಹೆಚ್ಚಾದಾಗ ಮಾತ್ರ ಸಾಧ್ಯವಾಯಿತು. ಸಾಮಾನ್ಯ ಮಾನವ ದುಡಿಮೆಯನ್ನು ಮಾಡುವವರು ಮತ್ತು ಆ ದುಡಿಮೆಯನ್ನು ನಿರ್ದೇಶಿಸುವ ವ್ಯಾಪಾರ, ಸಾರ್ವಜನಿಕ ವ್ಯವಹಾರಗಳನ್ನು ನಡೆಸುವ, ಮುಂದೆ ಕಲೆ ಮತ್ತು ವಿಜ್ಞಾನಗಳಲ್ಲಿ ಮುಳುಗಿದ ಸವಲತ್ತಿನ ವ್ಯಕ್ತಿಗಳು, ಇವರ ನಡುವೆ ಶ್ರಮವಿಭಜನೆ ಮಾಡಿದ್ದು ಇದಕ್ಕೆ ಅಗತ್ಯವಾದ ಆಧಾರವನ್ನು ಒದಗಿಸಿತು. ಈ ಶ್ರಮ ವಿಭಜನೆಯ ಅತ್ಯಂತ ಸರಳ ಮತ್ತು ಸಹಜ ರೂಪವೆಂದರೆ ಗುಲಾಮಗಿರಿ."

ಬಂಡವಾಳಶಾಹಿಯಲ್ಲಿ ವರ್ಗ ದಬ್ಬಾಳಿಕೆಯೊಳಗೆ ಈ ಸಾಮಾಜಿಕ ಬೆಳವಣಿಗೆಯು ಪರಿಣತಿಯನ್ನು ಮುಟ್ಟಿತು. ಇಂದು ಮಾನವ ಸಮಾಜದ ಉತ್ಪಾದನಾಶಕ್ತಿಗಳು ಎಷ್ಟು ಸುಧಾರಿತ ಹಂತವನ್ನು ಮುಟ್ಟಿದೆಯೆಂದರೆ, ಮಾನವ ಸಂಸ್ಕೃತಿಯಲ್ಲಿ ಉತ್ತಮವಾದುದೆಲ್ಲವನ್ನೂ ಕೇವಲ ಕೆಲವೇ ಶೋಷಕರ ಸಣ್ಣ ಗುಂಪಿನ ಹಿಡಿತದಲ್ಲಿಡದೆ ಇಡೀ ಸಮಾಜದ ಆಸ್ತಿಯನ್ನಾಗಿಯೇ ಮಾಡಬಹುದು. ಆದ್ದರಿಂದಲೇ ಬಂಡವಾಳಶಾಹಿ ಬೆಳವಣಿಗೆಯು ಕೊನೆಗೆ ಅನಿವಾರ್ಯವಾಗಿ ಮಾನವ ಸಮಾಜವನ್ನು "ಪ್ರಾಚೀನ ಸಮತಾವಾದ"ವಲ್ಲದ ಒಂದು ಹೊಸ ಸಮತಾವಾದದ ಹಂತಕ್ಕೆ ಕರೆದೊಯ್ಯುತ್ತದೆ. ಶೋಷಣೆಗೆ ಸಿಕ್ಕಿದ ಬಹುಸಂಖ್ಯಾತರು ಶೋಷಣೆ ನಡೆಸುವ ಅಲ್ಪಸಂಖ್ಯಾತರನ್ನು ಹೊರದೂಡಿ ರಾಜ್ಯಶಕ್ತಿಯನ್ನು ತಮ್ಮ ಕೈಗೆ ತೆಗೆದುಕೊಂಡು, ಈಗ ವರ್ಗ ಸಮಾಜದಲ್ಲಿ ಇರುವಂತೆ ಅಲ್ಪಸಂಖ್ಯಾತ ಶೋಷಕರ ಹಿತಾಸಕ್ತಿಗಳಿಗೆ ಅದನ್ನು ಬಳಸಿಕೊಳ್ಳದೆ ಸಮಾಜದ ಸಾರ್ವಜನಿಕ ಹಿತಾಸಕ್ತಿಗಳಿಗೆ ಅದನ್ನು ಉಪಯೋಗಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆ ಎಂದು ಮಾರ್ಕ್ಸ್‌ವಾದ ಪರಿಗಣಿಸುತ್ತದೆ."

ಭಾರತದಲ್ಲಿ :

ಈ ರೀತಿಯ ಚಾರಿತ್ರಿಕ ಬೆಳವಣಿಗೆಯ ವಿಧಾನಕ್ಕೆ ಭಾರತವೇನೂ ಹೊರತಾಗಿಲ್ಲ. ಇಲ್ಲಿಯೂ ಕೂಡ "ಪ್ರಾಚೀನ ಸಮಾಜವಾದ"ಹೊರಟು ಹೋಗಿ ವರ್ಗಸಮಾಜ ನೆಲೆಗೊಂಡಿತು. ಈ ವರ್ಗಸಮಾಜವೇ ಅಥವಾ ಈ ವರ್ಗಸಮಾಜದ ಆಳುವವರ್ಗಗಳೇ ಈ ಸಮಾಜದ ನಾಗರಿಕತೆಯ ಅಧಿಕಾರಿಗಳಾದರು. ಪ್ರಾಚೀನ ಮತ್ತು ಮಧ್ಯಕಾಲದ ಭಾರತೀಯ ಸಮಾಜದ ಬೆಳುವಳಿ ಎಲ್ಲವೂ, ಎಂದರೆ ವೇದಕಾಲದ, ಮತ್ತು ವೇದಕಾಲಾನಂತರದ ಮತ್ತು ಇಸ್ಲಾಂ ಸಂಸ್ಕೃತಿಯ ಶ್ರೀಮಂತ ಭಂಡಾರವೆಲ್ಲವೂ ವರ್ಗಸಮಾಜದ ಸೃಷ್ಟಿಯೇ ಆಗಿದೆ. ಇದು ಕೇರಳದ ಖ್ಯಾತ ಮಾವೆಲಿಗಳ ಪರಂಪರೆಯ ಮೂಲಕ ಸಾಮಾಜಿಕ ನೆನಪಾಗಿ ಉಳಿದಿದೆ. ಮಾವೆಲಿಗಳ ಕಾಲಕ್ಕೆ ನಾವು ಹಿಂತಿರುಗಬೇಕೆಂದು ಹೇಳುವ ಪುನಶ್ಚೇತನವಾದಿಗಳಿಗೆ, ಮಾವೆಲಿಗಳ ಕಾಲದ "ಸಮಾನತೆ" ಮತ್ತು "ಶೋಷಣೆಯ ಅಭಾವ"ಗಳನ್ನು ಅನುಭವಿಸತೊಡಗಿದರೆ, ಮಾವೆಲಿಗಳ ಸಾಂಕೇತಿಕ ಸೋಲಿನ ನಂತರ ನಮ್ಮ ದೇಶದಲ್ಲಿ ಉತ್ಪಾದನೆಯಾಗಿರುವ ಜೀವನದ ಒಳ್ಳೆಯ ವಸ್ತುಗಳು ಇರದಿದ್ದರೆ ನಮ್ಮ ಸಾಮಾಜಿಕ ಮತ್ತು ವೈಯಕ್ತಿಕ ಜೀವನ ಎಷ್ಟು ಸಪ್ಪೆಯಾಗಿರುತ್ತದೆ ಎಂಬುದು ಅರ್ಥವಾಗುವುದಿಲ್ಲ.

ಈ ಮಾತು ಕೇವಲ ಕೇರಳಕ್ಕೆ ಮಾತ್ರವಲ್ಲ, ಭಾರತಕ್ಕೂ, ಜಗತ್ತಿಗೂ ಅನ್ವಯವಾಗುತ್ತದೆ. ವರ್ಗಶೋಷಣೆ ಮತ್ತು ವರ್ಗದಬ್ಬಾಳಿಕೆ ಎನ್ನುವುದು ಮಾನವ ಚರಿತ್ರೆಯ ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಯುಗಗಳೆಲ್ಲದರಲ್ಲೂ ಸಾರ್ವತ್ರಿಕವಾಗಿದೆ; ಜಗತ್ತಿನ ಎಲ್ಲ ಖಂಡಗಳ ಎಲ್ಲಾ ದೇಶಗಳಲ್ಲೂ ಇದೆ. ವರ್ಗ ದಬ್ಬಾಳಿಕೆ ಮತ್ತು ವರ್ಗಶೋಷಣೆಯ ಸ್ಪಷ್ಟ ಸ್ವರೂಪಗಳು ಮಾತ್ರ ಒಂದು ದೇಶದಿಂದ ಒಂದು ದೇಶಕ್ಕೆ ಭಿನ್ನವಾಗಿದೆ.

ಕಾರ್ಲ್‌ಮಾರ್ಕ್ಸ್‌ನು ಬಂಡವಾಳ ಪೂರ್ವ ಸಮಾಜಗಳ ಚಿರಸ್ಮಾರಕ ಅಧ್ಯಯನವನ್ನು ಕೈಗೊಂಡನು. ಈ ಕೆಲಸ ಒಬ್ಬ ಸಂಶೋಧಕನಿಂದ ಪೂರ್ಣಗೊಳ್ಳುವಂತಹುದಲ್ಲ. ಆದ್ದರಿಂದಲೇ ಮಾರ್ಕ್ಸ್‌ನಿಗೆ ಕೂಡ ಅದನ್ನು ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ವಿವಿಧ ದೇಶಗಳಲ್ಲಿ "ಪ್ರಾಚೀನ ಸಮತಾವಾದೀ" ಸಮಾಜಗಳು ಯಾವ ವಿಶಿಷ್ಟ ಸನ್ನಿವೇಶಗಳಲ್ಲಿ ನಾಶವಾಯಿತೆಂಬುದನ್ನು ಮಾರ್ಕ್ಸ್ ಸ್ಪಷ್ಟವಾಗಿ ಸೂಚಿಸಿದ. ಈ ವಿಚಾರಗಳನ್ನು ಪರಿಶೀಲಿಸುವುದು ಈ ಲೇಖನದ ಉದ್ದೇಶಕ್ಕೆ ಮೀರಿದ್ದು. ಭಾರತದಲ್ಲಿ ಇಂಥ ಪ್ರಕ್ರಿಯೆಯೇ ಸ್ಪಷ್ಟವಾಗಿ ಚಾತುರ್ವರ್ಣ್ಯದ ಸ್ವರೂಪವನ್ನು ಪಡೆಯಿತು ಎಂಬಷ್ಟನ್ನು ಹೇಳಿದರೆ ಸಾಕು.

ಇ. ಎಂ. ಎಸ್. ನಂಬೂದಿರಿಪಾದ್

'ಚಾತುರ್ವರ್ಣ್ಯ' ಎಂಬ ಮಾತು ನಾಲ್ಕು ಜಾತಿಯ ವ್ಯವಸ್ಥೆಯನ್ನು ಸೂಚಿಸುವುದಾದರೂ, ಮೂಲಭೂತವಾಗಿ ಅಲ್ಲಿ ಮೂರು ಜಾತಿಗಳು ಮಾತ್ರ ಇತ್ತು. ಕ್ರಮವಾಗಿ ಯೋಧರು ಅಥವಾ ಕ್ಷತ್ರಿಯರು, ಧರ್ಮಾಚರಣೆಗಳನ್ನು ಮಾಡುವವರು ಅಥವಾ ಬ್ರಾಹ್ಮಣರು, ಉಳಿದವರು ವೈಶ್ಯರು. ಬಣಗಳಲ್ಲಿ ನಡೆಯುವ ಯುದ್ಧಗಳೇ ಒಂದು ಪ್ರಮುಖ ಲಕ್ಷಣವಾದ ಸಮಾಜದಲ್ಲಿ, ಪ್ರತಿಯೊಬ್ಬರಿಗೂ ಮೀಸಲಾಗಿಡುತ್ತಿದ್ದ ಕೆಲಸಗಳ ಆಧಾರದ ಮೇಲೆಯೇ ಈ ರೀತಿಯ ವಿಭಜನೆ ಆಗಿತ್ತು. ಬಣಗಳಲ್ಲಿ ಯುದ್ಧ ಮಾಡುವುದೇ ಪ್ರಮುಖ ಕೆಲಸವಾಗಿದ್ದರಿಂದ ಕ್ಷತ್ರಿಯರು ಸಹಜವಾಗಿಯೇ ಈ ಕ್ರಮದಲ್ಲಿ ಮೊದಲ ಸ್ಥಾನಗಳಿಸಿಕೊಂಡಿದ್ದರು; ಕ್ರಮೇಣ ಹೇಗೋ ಬ್ರಾಹ್ಮಣರು ಅವರಿಗೆ ಸಮಾನವಾದ ಅಥವಾ ಅದಕ್ಕೂ ಹೆಚ್ಚಿನ ಸ್ಥಾನವನ್ನು ಪಡೆದರು. ಏಕೆಂದರೆ ಯಾವ ಯುದ್ಧವನ್ನೂ ಇವರ ಆಚರಣೆಗಳಿಲ್ಲದೆ ಆರಂಭಿಸಲಾಗುತ್ತಿರಲಿಲ್ಲ; ಅಲ್ಲಿಂದ ಮುಂದೆ, ಯಾರು ತಮ್ಮ ವಿರಾಮ ವೇಳೆಯನ್ನು ಜಪತಪಗಳಿಗಾಗಿ ಧರ್ಮಗ್ರಂಥಗಳ ಅಧ್ಯಯನಕ್ಕಾಗಿ ಮೀಸಲಾಗಿಟ್ಟಿರೋ ಅವರ ಸೇವೆ ಸಮಾಜಕ್ಕೆ ಹೆಚ್ಚಾಗಿ ಬೇಕಾಯಿತು. ಏಕೆಂದರೆ ಈ ಮೂಲಕ ಸಮಾಜ, ಪ್ರಕೃತಿಯ ಮೇಲೆ ಹೆಚ್ಚು ಹೆಚ್ಚು ಹಿಡಿತವನ್ನಿಟ್ಟುಕೊಳ್ಳಲು ಸಾಧ್ಯವಾಗುತ್ತಿತ್ತು. ಯುದ್ಧಗಳನ್ನು ಮಾಡುವುದು, ಹೆಚ್ಚು ಪ್ರದೇಶಗಳನ್ನು ಗೆದ್ದುಕೊಳ್ಳುವುದು, ಇದರಲ್ಲಿ ಪರಿಪೂರ್ಣತೆ ಪಡೆದಂತೆಲ್ಲಾ ಈ ಮೂರು ವರ್ಣಗಳಾಚೆ ಇನ್ನೂ ಒಂದು ದೊಡ್ಡ ಗುಂಪು ಈ ಬಣ ಸಮಾಜದ ಅಂಗವಾಗಿ ಬೆಳೆಯಿತು. ಅವರೇ ಶೂದ್ರರು.

ಬಣಗಳ ನಡುವೆ ಯುದ್ಧ, ಒಂದು ಗುಂಪು ಮತ್ತೊಂದನ್ನು ಗೆಲ್ಲುವುದು, ಇತ್ಯಾದಿಗಳಿಂದ ಸಾಮ್ರಾಜ್ಯಗಳು, ಸೈನ್ಯ, ಆಡಳಿತ ಅಂಗಗಳು ಮುಂತಾದ ಹೊಸ ಸಂಸ್ಥೆಗಳು ರಾಜಕೀಯ ಕ್ಷೇತ್ರದಲ್ಲಿ ಉಗಮವಾದವು. ಸಾಮಾಜಿಕ, ಆರ್ಥಿಕ ಕ್ಷೇತ್ರದಲ್ಲಿ ಉತ್ಪಾದನೆಯ ಹೊಸ ವಿಧಾನಗಳು ಮತ್ತು ವ್ಯವಸ್ಥೆಯ ಹೊಸರೂಪಗಳು ಹುಟ್ಟಿಕೊಂಡವು. ಇದರಿಂದ ಸರ್ವತೋಮುಖ ಮುನ್ನಡೆ ಸರಾಗವಾಗಿ ಆಗಿ ಮುಂದೆ ಇದರಿಂದ ಅನೇಕ ಜಾತಿ ಉಪಜಾತಿಗಳು ರೂಪಗೊಂಡವು. ಸಾಮಾಜಿಕ ಪರಂಪರೆಯಲ್ಲಿ ಪ್ರತಿಯೊಂದೂ ಒಂದು ನಿರ್ದಿಷ್ಟವಾದ ಸ್ಥಾನವನ್ನು ಪಡೆದವು.

ಇದು ಒಟ್ಟಾರೆ ಭಾರತಕ್ಕೆ ಸಾರ್ವತ್ರಿಕವಾಗಿ ಅನ್ವಯವಾಗಬಹುದಾದರೂ, ಜಾತಿ ವ್ಯವಸ್ಥೆ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ವ್ಯತ್ಯಾಸವನ್ನು ಪಡೆದಿದೆ. ಉದಾಹರಣೆಗೆ–ಕೇರಳದಲ್ಲಿ–ನಾಲ್ಕು ವರ್ಣಗಳಲ್ಲಿ ಒಂದಾದ ವೈಶ್ಯರು ಇರಲೇ ಇಲ್ಲ. ಕೇರಳದ ಸಾಮಾಜಿಕ ವ್ಯವಸ್ಥೆಯ ಈ ಅನನ್ಯ ಲಕ್ಷಣದ ಮುಖ್ಯ ಕಾರಣವನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಬೇಕು. ಇಲ್ಲಿ ಗಮನಿಸಬೇಕಾದ ಪ್ರಮುಖ ಅಂಶವೆಂದರೆ ಭಾರತದ ಜಾತಿ ವ್ಯವಸ್ಥೆಯು ಸಮಾಜದಲ್ಲಿ ವರ್ಗವಿಭಜನೆಯನ್ನು ಒಳಗೊಂಡಿವೆ ಎಂಬ ವಿಚಾರ.

ಹೀಗೆ ಹೇಳಿದಾಗ ಸ್ವಲ್ಪ ಸಂಕೀರ್ಣತೆ ತಲೆದೋರಬಹುದು. ಗ್ರೀಕ್, ರೋಮ್ ಮತ್ತು ಪಶ್ಚಿಮ ಏಷ್ಯಾದ ಕೆಲವು ದೇಶಗಳಲ್ಲಿದ್ದಂತೆ ಭಾರತದಲ್ಲಿ ಬಹಿರಂಗವಾಗಿ ಘೋಷಿತವಾದ ಗುಲಾಮ ಸಮಾಜ ಇರಲಿಲ್ಲ. ಗುಲಾಮ ಸಮಾಜದ ಲಕ್ಷಣವಾದ ವರ್ಗದಬ್ಬಾಳಿಕೆಯ ತಿರುಳನ್ನು ಇಲ್ಲಿ ಜಾತಿ ಅಸಮಾನತೆಯ ಹಿಂದೆ ಬಚ್ಚಿಡಲಾಗಿದ್ದು, ಇದನ್ನು ವೇದ ಮತ್ತು ವೇದಾನಂತರದ ಬರಹಗಳಲ್ಲಿ ಅಧಿಕೃತಗೊಳಿಸಲಾಗಿತ್ತು; ಪಶ್ಚಿಮಏಷ್ಯಾದಿಂದ ಹಲವು ದಾಳಿಗಳು ಆದ ನಂತರದ ಭಾರತೀಯ ಇತಿಹಾಸದ ಹಂತದಲ್ಲಿ ಒಂದು ರೀತಿಯ ಊಳಿಗಮಾನ್ಯ-ಸೈನಿಕ ಆಳ್ವಿಕೆ ಭದ್ರವಾಗಿ ನೆಲೆಗೊಂಡಿತು (ಇದರ ಪ್ರಾರಂಭಿಕ ರೂಪಗಳನ್ನು ನಂತರದ ಹಿಂದೂ ಸಾಮ್ರಾಜ್ಯಗಳ ಸೈನಿಕ-ರಾಜಕೀಯ ವ್ಯವಸ್ಥೆಯಲ್ಲಿ ಕಂಡುಕೊಳ್ಳಬಹುದು). ಆ ಯುಗದ ಲಕ್ಷಣವಾದ ಜಾತಿ ಮತ್ತು ಧಾರ್ಮಿಕ ಕದನಗಳ ಹಿಂದೆ ಊಳಿಗಮಾನ್ಯ ದಬ್ಬಾಳಿಕೆ ಅಡಗಿಸಲಾಗಿತ್ತು.

ಜಾತಿಪದ್ಧತಿಯ ಆಧಾರದ ಮೇಲೆ ನಿಂತಿರುವ ಭಾರತೀಯ ಸಾಮಾಜಿಕ ವ್ಯವಸ್ಥೆಯ ವಿಶಿಷ್ಟ ಲಕ್ಷಣಗಳಲ್ಲೊಂದೆಂದರೆ, ಮಾರ್ಕ್ಸ್‌ವಾದಿ ಪರಿಭಾಷೆಯಲ್ಲಿ ಹೇಳುವಹಾಗೆ ಪ್ರಾಚೀನ ಸಮತಾವಾದ, ಗುಲಾಮಗಿರಿ ಮತ್ತು ಊಳಿಗಮಾನ್ಯ ಪದ್ಧತಿ ಎಂಬ ಮೂರು ಸಾಮಾಜಿಕ ವ್ಯವಸ್ಥೆಯ ಮಾದರಿಗಳಿಗೆ ಅದು ಸುಲಭವಾಗಿ ಹೊಂದಿಕೊಳ್ಳುವುದು.

ಜಾತಿವ್ಯವಸ್ಥೆ ಮತ್ತು ಅದರಿಂದ ಬರುವ ಜಾತಿಪ್ರಜ್ಞೆ, ಇವುಗಳಲ್ಲಿ ಬಣವ್ಯವಸ್ಥೆ ಮತ್ತು ಬಣಪ್ರಜ್ಞೆಯ ಅಂಶಗಳನ್ನು ಕಾಣಬಹುದು. ಬೇರೆ ಮಾತಿನಲ್ಲಿ ಹೇಳುವುದಾದರೆ, ಜಾತಿ ಎಂದರೆ ಸಮಾಜವು ಬಣವ್ಯವಸ್ಥೆಯನ್ನು ಇನ್ನೂ ಸಂಪೂರ್ಣವಾಗಿ ಮೀರಿರದ ಸಾಮಾಜಿಕ ವ್ಯವಸ್ಥೆ, 'ಬಣಸಮಾಜದ ಮೇಲೆ ಜಾತಿಯನ್ನು ಹೇರಿದ ರೀತಿ ಮತ್ತು ಜಾತಿಪರಂಪರೆಯಲ್ಲಿ ಮೇಲುಕೀಳುಗಳ ಸಂಬಂಧಗಳು ಸ್ಥಾಪನೆಯ ರೀತಿ ಇವೆಲ್ಲವೂ ಮಾಲೀಕರು ಮತ್ತು ಗುಲಾಮರ ನಡುವಿನ ವಿಭಜನೆಯ ಉದ್ದೇಶವನ್ನು ಪೂರೈಸಲು ಸಹಾಯ ಮಾಡುತ್ತವೆ. ಮತ್ತೆ, ಸಮಾಜವು ಗುಲಾಮಗಿರಿ ಹಂತದಿಂದ ಊಳಿಗಮಾನ್ಯ ಹಂತಕ್ಕೆ ಬದಲಾಗುವಷ್ಟು ಪಕ್ವವಾದಾಗ, ಜಾತಿಯನ್ನು ಮಾಲೀಕ ಮತ್ತು ಜೀತದಾಳಿನ ಸಂಬಂಧಗಳನ್ನು ರಕ್ಷಿಸಲು ಉಪಯೋಗಿಸಿಕೊಳ್ಳಬಹುದು.

(ಮುಂದುವರೆಯುವುದು)

ಅಸ್ಸಾಂ ಚಳುವಳಿಕಾರರ ಹಲ್ಲೆಗೆ ಮಾರ್ಕ್ಸ್‌ವಾದಿ ಪಕ್ಷ ಗುರಿ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳು ಕಳೆದ ಎರಡು ವರ್ಷಗಳಿಂದ ಅಸ್ಸಾಂ ಚಳುವಳಿಕಾರರ ಹಲ್ಲೆಗೆ ಗುರಿಯಾಗುತ್ತಿವೆ. 1978ರ ವಿಧಾನಸಭೆ ಚುನಾವಣೆಗಳ ಸಮಯದಲ್ಲಿ ಅಸ್ಸಾಂ ಜಾತಿಯವಾದಿ ದಳ ಮತ್ತು ಪೌರ್ವಾತ್ಯಲೋಕ ಪರಿಷತ್‌ಗಳು ನಮ್ಮ ಪಕ್ಷದ ಮೇಲೆ ಆಕ್ರಮಣ ಆರಂಭಿಸಿದವು.

ಮಾರ್ಕ್ಸ್‌ವಾದಿ ಪಕ್ಷವು ಮೊದಲಿನಿಂದಲೂ ಅಲ್ಪಸಂಖ್ಯಾತರ ಹಕ್ಕುಗಳ ಪರವಾಗಿ ಮತ್ತು ಅಲ್ಲಿನ ವಿವಿಧ ಭಾಷಾಗುಂಪುಗಳ ಸೌಹಾರ್ದತೆಯ ಪರವಾಗಿ, ದೇಶದ ಐಕ್ಯತೆಯ ಪರವಾಗಿ ದೃಢವಾಗಿ ನಿಂತಿದೆ. ಇದು ಕಮ್ಯುನಿಸ್ಟ್ ವಿರೋಧಿಗಳನ್ನು ಕೆರಳಿಸಿ ಅವರು ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ಮಾಡಲಾರಂಭಿಸಿದ್ದಾರೆ. ಅಸ್ಸಾಂ ಇಡೀ ಈ ಕೆಲಸ ನಡೆದಿದೆ.

1979ರಲ್ಲಿ ಅಸ್ಸಾಂನ ಅನೇಕ ಕಡೆಗಳಲ್ಲಿ ಎಸ್. ಎಫ್. ಐ. ಕಾರ್ಯಕರ್ತರ ಮೇಲೆ ಗೂಂಡಾಗಳ ದಾಳಿ ನಡೆದಿದೆ. ಕಮಲ್‌ಪುರದಲ್ಲಿ, ಗೌಹಾಟಿ ವಿಶ್ವವಿದ್ಯಾಲಯದಲ್ಲಿ, ಗೌಹಾಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ, ನಲ್ಬರಿಯಲ್ಲಿ, ಮಿರ್ಜಾ, ಬಾರ್ಪೆಟ್ಟಾಗಳಲ್ಲಿ, ಚಾಕ್ಲಾಮಚಲ್‌ಪುರ, ಬಜಲಿ ಬಿಹಾಬಾರಿ, ಭಲೂಕಿಗಾವ್, ಭನಿಯಾಕುಚಿ, ಪೆಂಡಾಪುರಗಳಲ್ಲಿ ಎಸ್. ಎಫ್. ಐ. ವಿದ್ಯಾರ್ಥಿಗಳನ್ನು ಥಳಿಸಿ ಹಿಂಸಿಸಲಾಗಿದೆ. ಸದಾನಂದದಾಸ್ ಅವರನ್ನು ವಿಪರೀತ ಹಿಂಸಿಸಿ, ಎಸ್. ಎಫ್. ಐ. ಅನ್ನು ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘದ ಜೊತೆ ಸೇರಿಸುವಂತೆ ಒತ್ತಾಯಿಸಲಾಗಿತ್ತು. ಗಾಂಧಿ ವಿಶ್ವವಿದ್ಯಾಲಯದ ಬ್ರಿಜ್‌ಲಾಲ್ ಎಂಬ ಹರಿಜನ ವಿದ್ಯಾರ್ಥಿಯ ಮೇಲೆ ಹಲ್ಲೆ ನಡೆದಿದೆ. ಹೌಲಿಯಲ್ಲಿ ಯುವಕ ಫೆಡರೇಶನ್‌ನ ನಿರಂಜನ ದಾಸ್ ಮತ್ತು ಬೀರೆನ್‌ಚೌಧುರಿಯವರನ್ನು ಥಳಿಸಲಾಗಿದೆ. ಥಿಹುನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಛೇರಿಯನ್ನು ರೌಡಿಗಳು ಆಕ್ರಮಿಸಿ, ಕರಪತ್ರಗಳು, ಫೈಲುಗಳನ್ನು ಸುಟ್ಟುಹಾಕಿದ್ದಾರೆ. ಆರ್. ಸಿ. ಸಿ. ವಿದ್ಯಾರ್ಥಿನಿಲಯದ ಮಿಹಿರ್‌ಕಾಂತಿದಾಸ್ ಎಂಬ ವಿದ್ಯಾರ್ಥಿಯನ್ನು ಮೊದಲನೇ ಮಹಡಿಯಿಂದ ಕೆಳಕ್ಕೆ ಎತ್ತಿಹಾಕಿದ್ದಾರೆ, ಎಸ್. ಎಫ್. ಐ. ಗೆ ಸೇರಿದ ವಿದ್ಯಾರ್ಥಿಗಳ ಹಾಸಿಗೆ ಬಟ್ಟೆ ಪುಸ್ತಕಗಳನ್ನು ಸುಟ್ಟುಹಾಕಿದ್ದಾರೆ.

ಸಿ. ಐ. ಟಿ. ಯು., ಪಕ್ಷದ ಕಾರ್ಯಕರ್ತರ ಮೇಲೂ ದಾಳಿ ತಪ್ಪಿಲ್ಲ. ಪಕ್ಷದ ಸಭೆ ಮುಗಿಸಿ ಬಸ್ಸಿನಲ್ಲಿ ಹಿಂತಿರುಗುತ್ತಿದ್ದ ಪಕ್ಷದ ಸದಸ್ಯರನ್ನು ಒತ್ತಾಯದಿಂದ ಕೆಳದಿಳಿಸಿ ಹೊಡೆಯಲಾಗಿದೆ. ಸುಬೋಧದಾಸ್ ಎಂಬ ಸಿ. ಐ. ಟಿ. ಯು. ಕಾರ್ಯಕರ್ತರು ಹಲ್ಲೆಗೊಳಗಾಗಿದ್ದಾರೆ. ಥಿಹುನಲ್ಲಿ ಪಕ್ಷದ ಸದಸ್ಯ ಪ್ರಫುಲ್ಲಶರ್ಮ, ಅತುಲ್‌ಶರ್ಮ ಇವರನ್ನು ಹಿಂಸಿಸಲಾಗಿದೆ. ಬಾಕೊನಲ್ಲಿ ಯುವಕ ಫೆಡರೇಶನ್‌ನ ಡಾಕ್ಟರ್ ದಿನೇಶ್‌ದೇಕ್ ಆಕ್ರಮಣಕ್ಕೊಳಗಾಗಿದ್ದಾರೆ. ಶಾರ್‌ಭಗ್‌ನ ಪಕ್ಷದ ಕಛೇರಿ ಆಕ್ರಮಣಕ್ಕೊಳಗಾಗಿತ್ತು. ಸರ್ಪೆಟದಲ್ಲಿ ಇಬ್ಬರು ಪ್ರಗತಿವಾದಿ ಅಧ್ಯಾಪಕರನ್ನು "ರಾಷ್ಟ್ರೀಯವಾದಿ ವಿದ್ಯಾರ್ಥಿಗಳು" ಥಳಿಸಿದ್ದರು. ಬರ್ಸಾದ ಕಿಸಾನ್‌ಸಭಾ ಕಾರ್ಯಕರ್ತ ದಂಬರುಧರ್‌ಪಾಠಕ್ ಹೊಡೆತ ಅನುಭವಿಸಬೇಕಾಯಿತು. ಬರ್ಪೆಟಾ ರಸ್ತೆಯ ಪಕ್ಷದ ಕಛೇರಿಯನ್ನು ಗೂಂಡಾಗಳು ದಾಳಿಮಾಡಿ ಪಕ್ಷದ ಕಾರ್ಯಕರ್ತರನ್ನು ಹೊಡೆದಿದ್ದರು. ಥಿಹುನಲ್ಲಿ ಸೈಕಲ್ ಚೈನುಗಳಿಂದ ಕಾರ್ಯಕರ್ತರಿಗೆ ಹೊಡೆಯಲಾಗಿತ್ತು.

ಗೌಹಾಟಿ ಮುನಿಸಿಪಲ್ ಕಾರ್ಪೊರೇಷನ್ನಿನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಸದಸ್ಯ ಸನತ್‌ರಾಯ್, ಅಶೋಕ್‌ರಾಯ್ ಮತ್ತು ನಾರಾಯಣಕುಮಾರ್, ಹಾಜೋಕಾಮಯ ಕಿಸಾನ್‌ಸಭಾ ಕಾರ್ಯದರ್ಶಿ ಭೂಪೇನ್ ದೇಖ ಇವರೆಲ್ಲ ಹಲ್ಲೆಗೊಳಗಾಗಿದ್ದಾರೆ ತಲ್ವೇಶ್ವರನಾಥ್ ಅವರನ್ನು ಅಪಹರಿಸಿ, ಗಣಸಂಗ್ರಾಮ್ ಪರಿಷತ್ ಕಛೇರಿಗೆ ಕರೆದೊಯ್ದು ಅಲ್ಲಿ ಥಳಿಸಲಾಗಿತ್ತು.

1980ರಲ್ಲಿ ಈ ಹಲ್ಲೆಗಳು ಮತ್ತಷ್ಟು ಹೆಚ್ಚಾಗಿವೆ. ಎಸ್. ಎಫ್. ಐ. ಕಾರ್ಯಕರ್ತರಂತೂ ಎಲ್ಲೆಡೆ ಹಲ್ಲೆಗೊಳಗಾಗಿದ್ದಾರೆ. ದಿಬ್ರುಗರ್ ಜಿಲ್ಲೆಯಲ್ಲಿ ನಮ್ಮ ವಿದ್ಯಾರ್ಥಿಗಳನ್ನು ಸದ್ಯದ ಚಳುವಳಿಕಾರರ ಅಂಶಗಳು ಥಳಿಸಿದರು. ನಾಮರ್‌ರೂಪ್ ಕೈಗಾರಿಕಾ ಪಟ್ಟಣದಲ್ಲಿ ಪಕ್ಷದ ಕಾರ್ಯಕರ್ತರು, ಸಿ. ಐ. ಟಿ. ಯು. ಕಾರ್ಯಕರ್ತರ ಮೇಲೆ ದಾಳಿಗಳು ವಿಪರೀತ ನಡೆಯುತ್ತಿವೆ. ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘವನ್ನು ಸೇರದಿದ್ದುದಕ್ಕಾಗಿ ಎಸ್. ಎಫ್. ಐ. ವಿದ್ಯಾರ್ಥಿಗಳನ್ನು ಹಿಂಸಿಸಲಾಗುತ್ತಿದೆ. ರಾಸಾಯನಿಕ ಗೊಬ್ಬರ ಕಾರ್ಖಾನೆಯ ಟ್ರೇಡ್‌ಯೂನಿಯನ್ ಮುಖಂಡ ಮನೋಹರ್ ಸೈಕಿಯ ಹಲ್ಲೆಗೊಳಗಾಗಿ, ಗೋದಾಮಿನಲ್ಲಿ ಬಂಧಿಸಲ್ಪಟ್ಟಿದ್ದರು. ಎಸ್.ಎಫ್.ಐ. ಮಹಿಳಾ ಕಾರ್ಯಕರ್ತರಾದ ಕು ಹಿಂಪ ಬರ್ರಾ ಮತ್ತು ಅಜಂತಾಗೊಗೊಯ್ ಹಲ್ಲೆಗೊಳಗಾಗಿದ್ದರು. ನಮರ್‌ರುಪ್‌ನ ಯುವಕ ಫೆಡರೇಶನ್ನಿನ ಉಪಾಧ್ಯಕ್ಷ ಅಮೃತ್ ಭುನಿಯಾ ಅವರ ಜೀವ ತೆಗೆಯುವ ಪ್ರಯತ್ನ ನಡೆಸಲಾಗಿತ್ತು. ಸಿ. ಐ. ಟಿ. ಯು. ನೇತೃತ್ವದ ರಾಸಾಯನಿಕ ಗೊಬ್ಬರ ಕಾರ್ಖಾನೆಯ ಕೆಲಸಗಾರರ ಸಂಘದ ಪ್ರಧಾನ ಕಾರ್ಯದರ್ಶಿ ಗಂಗೇಶ್ವ ಗೊಗೊಯ್ ಮತ್ತು ಮುಖಂಡ ಫುಕುಲ್ ಅಲಿ ತೀವ್ರ ಹಲ್ಲೆಗೆ ಒಳಗಾಗಿ, ಅಲಿಯವರ ಬಲಗೈ ಇಂದಿಗೂ ಸರಿಹೋಗಿಲ್ಲ.

ಚರಿಯಾದಲ್ಲಿ ಅಸ್ಸಾಂ ಚಳುವಳಿಕಾರರ ಬೆಂಬಲಿಗರು ಕಬ್ಬಿಣದ ಸಲಾಕೆಗಳಿಂದ ಪಕ್ಷದ ಸದಸ್ಯರನ್ನು ಥಳಿಸಿದ್ದಾರೆ. ಮಾಣಿಕ್‌ಪುರದಲ್ಲಿ ಕಿಸಾನ್ ಸಭಾ ಕಾರ್ಯಕರ್ತರು ಹೊಡೆತ ತಿನ್ನಬೇಕಾಯಿತು. ಕಿಸಾನ್‌ಸಭಾ ಗೋಲ್‌ಪರಾದ ಕಾರ್ಯದರ್ಶಿ ಮತ್ತು ಪ್ರೌಢಶಾಲಾ ಅಧ್ಯಾಪಕ ಕಿಶೋರಿಮೋಹನ್ ರಾಯ್ ಅವರನ್ನು ರೌಡಿಗಳು ಅಪಹರಿಸಿ ಪೋಲೀಸರಿಗೆ ಕೊಟ್ಟಿದ್ದಾರೆ.

ಶಿವಸಾಗರ ಜಿಲ್ಲೆಯಲ್ಲಿ ಪಕ್ಷದ ಬೆಂಬಲಿಗ ಮತಿಲಾಲ್ ರಾಯ್‌ಚೌಧುರಿ ಹಲ್ಲೆಗೊಳಗಾದರು. ಪಕ್ಷದ ಜಿಲ್ಲಾ ಸಮಿತಿ ಸದಸ್ಯ ಜತೀನ್‌ಶರ್ಮ ಅವರ ಕೊಲೆಯತ್ನ ನಡೆಯಿತು. ಜೋರ್‌ಹಟ್ ಇಂಜಿನಿಯರಿಂಗ್ ಕಾಲೇಜಿನ ವಿದ್ಯಾರ್ಥಿಗಳ ಮೇಲೆ ತೀವ್ರ ಹಲ್ಲೆ ನಡೆಯಿತು. ನವ್‌ಗಾವ್ ಜಿಲ್ಲೆಯ ಕಿಸಾನ್‌ಸಭಾ ಕಾರ್ಯಕರ್ತರ ಮೇಲೆ ದಾಳಿ ನಡೆದು, ಎಸ್. ಎಫ್. ಐ. ಜಿಲ್ಲಾ ಸಮಿತಿ ಸದಸ್ಯ ಗಂಗಾನಂದ ತಾಲ್ಲೂಕ್‌ದರ್ ಅವರನ್ನು ಥಳಿಸಲಾಗಿದೆ ಸಿ. ಐ. ಟಿ. ಯು. ನೇತೃತ್ವದ ಸೆಣಬುಕಾರ್ಖಾನೆ ಕಾರ್ಮಿಕ ಸಂಘದ ಕಛೇರಿಗೆ ದಾಳಿ ಇಡಲಾಗಿತ್ತು. ಲಕ್ಷ್ಮೀಪುರ ಜಿಲ್ಲೆಯಲ್ಲಿ ಪಕ್ಷದ ಜಿಲ್ಲಾಸಮಿತಿ ಸದಸ್ಯ ಪ್ರೊಫೆಸರ್ ತಶೇಶ್ವರ ಚರಿಯಾ ಅವರ ಮೇಲೆ ಹಲ್ಲೆ ನಡೆಯಿತು. ಲಕ್ಷ್ಮೀಪುರ ವಿದ್ಯಾರ್ಥಿ ಸಂಘದ ಚುನಾವಣೆಯ ಹಿಂದಿನದಿನ ಎಸ್. ಎಸ್. ಐ. ನಾಯಕ ಸುಕುಮಾರ್ ಚಕ್ರವರ್ತಿಯವರಿಗೆ ಹಲ್ಲೆಯಿಂದ ತೀವ್ರ ಗಾಯಗಳಾದವು.

ಸಿ. ಐ. ಟಿ. ಯು. ನೇತೃತ್ವದ ಎಲ್ಲ ಕೈಗಾರಿಕಾ ಕಾರ್ಮಿಕ ಸಂಘಗಳನ್ನು ನಾಶಪಡಿಸಿ ವಾಮಪಂಥೀಯರನ್ನು ಮುಗಿಸಲು ಗಣ ಸಂಗ್ರಾಮ ಪರಿಷತ್ ಮತ್ತು ಅಖಿಲ ಅಸ್ಸಾಂ ವಿದ್ಯಾರ್ಥಿ ಸಂಘ ಯೋಜನೆ ಹಾಕಿಕೊಂಡಿವೆ. ಲೋಕಪರಿಷತ್ ಆಶ್ರಯದಲ್ಲಿ ಗೌಹಾಟಿಯಲ್ಲಿ ಸಭೆನಡೆದು ನಮ್ಮ ಪಕ್ಷವನ್ನು ಕಟುವಾಗಿ ಟೀಕಿಸಲಾಯಿತು. ಈ ಸಭೆಯ ನಂತರ ಅಸ್ಸಾಂ ಚಳುವಳಿಕಾರರು ಪಕ್ಷದ ಮೇಲೆ ಹಲ್ಲೆಯನ್ನು ತೀವ್ರಗೊಳಿಸಿದರು. ನವ್‌ಗಾವ್‌ಪಟ್ಟಣದ ಅಧ್ಯಾಪಕ ಅಹೀಂದ್ರ ಸರ್ಕಾರ್, ಬ್ಯಾಂಕ್‌ಉದ್ಯೋಗಿ ನಿತ್ಯಭೂಷಣಪಾಲ್ ಇವರು ಮಾರ್ಕ್ಸ್‌ವಾದಿ ಪಕ್ಷ ಸೇರಿಸಿದ ಸಭೆಯಲ್ಲಿ ಭಾಗವಹಿಸಿದನಂತರ ಹಲ್ಲೆಗೊಳಗಾದರು. ಕಾಮರ್‌ರೂಪ್ ಜಿಲ್ಲೆಯ ಗೋರೇಶ್ವರ್ ಕಾಲೇಜಿನ ಐವರು ಅಧ್ಯಾಪಕರನ್ನು ವಾಮಪಂಥೀಯರೆಂದು ಶಂಕಿಸಿ, ಅವರು ಅಧ್ಯಾಪಕರಾಗಲು ಅನರ್ಹರೆಂದು ತೀರ್ಮಾನಿಸಲಾಯಿತು. ಆಡಳಿತವರ್ಗದ ಈ ಧೋರಣೆಯನ್ನು ಕಾಲೇಜಿನ ಎಸ್. ಎಫ್. ಐ. ಘಟಕ ತೀವ್ರವಾಗಿ ಖಂಡಿಸಿ ಎಲ್ಲ ವಿದ್ಯಾರ್ಥಿ ಅಧ್ಯಾಪಕರನ್ನು ಇದರ ವಿರುದ್ಧ ಸಂಘಟಿಸಿತು.

ದಿಬ್ರುಗರ್ ಜಿಲ್ಲೆಯ ನಾಮರ್‌ರೂಪ್‌ನಲ್ಲಿ ರಾಸಾಯನಿಕ ಗೊಬ್ಬರ ಕಾರ್ಖಾನೆಯ 3000 ಉದ್ಯೋಗಿಗಳ ಸಂಘಕ್ಕೆ ಚುನಾವಣೆಯು 1980ರ ಮಾರ್ಚಿ 23ರಂದು ನಡೆಯಲಿತ್ತು. ಗಣಸಂಗ್ರಾಮ್ ಪರಿಷತ್‌ನವರು "ಅಸ್ಸಾಂ ಐಕ್ಯತೆಗೆ ಕಂಬಾಮ್ಯುಟ ನಾಶಪಡಿಸಿ" ಎಂದು ಕೂಗುತ್ತಾ ಗಲಭೆ ನಡೆಸಿದರು. ಗೂಂಡಾಗಳನ್ನು ಟ್ರಕ್‌ಗಳಲ್ಲಿ ಕರೆತಂದರು. ತಮ್ಮ ಸಂಘಕ್ಕೆ ಸೇರದ ಅಸ್ಸಾಮಿ ನೌಕರರನ್ನು ಬೆದರಿಸಿದರು. ಚುನಾವಣೆ ತಮ್ಮ ಕಡೆಗೆ ಆಗದಿದ್ದುದನ್ನು ಕಂಡ ಸಂಗ್ರಾಮ್ ಪರಿಷತ್‌ನವರು ಮತ ಎಣಿಕೆ ಕೇಂದ್ರವನ್ನು ಆಕ್ರಮಿಸಿ, ಫಲಿತಾಂಶವನ್ನು ತಮ್ಮ ಕಡೆಗೆ ಬರೆಯುವಂತೆ ಎಣಿಕೆ ಅಧಿಕಾರಿಗಳನ್ನು ರಿವಾಲ್ವರ್ ತೋರಿಸಿ ಬೆದರಿಸಿದರು.

ಅಸ್ಸಾಂ ಹೊಸವರ್ಷದ ಬಿಹು ದಿನದಂದು ಎಲ್ಲ ಸಂಘಟನೆಗಳಿಗೆ ಸೇರಿದ ಜನರ ಬಹಿರಂಗ ಸಭೆ ಸೇರಿಸಲಾಗಿತ್ತು. ಅಖಿಲಅಸ್ಸಾಂ ವಿದ್ಯಾರ್ಥಿಸಂಘದವರು ಸಭೆಯನ್ನು ಆಕ್ರಮಣ ಮಾಡಿದರು. ಭಾಷಣಕಾರ ಪ್ರೊಫೆಸರ್ ಶಶಿಶರ್ಮಾ ಅವರು ಗಾಯಗೊಂಡರು. ಪೋಲೀಸರು ಇದನ್ನೆಲ್ಲ ನೋಡುತ್ತಾ ನಿಂತಿದ್ದರು. ನಂತರ ಗಾಯಗೊಂಡ ಎಸ್. ಎಫ್. ಐ ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದರು.

ಏಪ್ರಿಲ್ 19ರಂದು ಗೋಲ್‌ಪುರದ ಮಾರ್ಕ್ಸ್‌ವಾದಿ ವಿಧಾನಸಭಾ ಸದಸ್ಯ ರಬೀನ್ ಚೌಧುರಿ ಅಸ್ಸಾಂ ಚಳುವಳಿಯ ಬಗ್ಗೆ ಪಕ್ಷದ ನಿಲುವನ್ನು ಒಂದು ಸಭೆಯಲ್ಲಿ ವಿವರಿಸಿದರು. ಅದಿನ ಚೌಧುರಿ ಅವರ ಮನೆಯಲ್ಲಿ ಅಖಿಲಅಸ್ಸಾಂ ವಿದ್ಯಾರ್ಥಿ ಸಂಘದವರು ಅವರನ್ನು ಥಳಿಸಿದರು. ಬಲಿಪರದಲ್ಲಿ ಮೇ ದಿನದ ಸಭೆಯನ್ನು ಆಕ್ರಮಿಸಿ, ಪಕ್ಷದ ಜಿಲ್ಲಾ ಸಮಿತಿ ಸದಸ್ಯ ರಮಾಕಾಂತ ಆಚಾರ್ಯ ಅವರ ಮೇಲೆ ಹಲ್ಲೆ ಮಾಡಿದರು. ಮೇದಿನದ ಸಭೆಗೆ ಬಸ್ಸಿನಲ್ಲಿ ಬರುತ್ತಿದ್ದ ರಾಜ್ಯಸಮಿತಿ ಸದಸ್ಯ ಭೂಪೇನ್ ಬರ್ಬರ ಅವರನ್ನು ಒತ್ತಾಯದಿಂದ ಕೆಳಗಿಳಿಸಿ ಗಣಸಂಗ್ರಾಮ ಪರಿಷತ್ತಿನ ಕಚೇರಿಗೆ ಕರೆದೊಯ್ದು ಥಳಿಸಲಾಯಿತು. ಪೋಲೀಸರು ಕಾಮ್ರೇಡ್ ಬರ್ಬರ ಅವರನ್ನು ರಕ್ಷಿಸಿದರು.

ಅಸ್ಸಾಂ ಚಳುವಳಿಯ ನಾಯಕರು ತಮ್ಮ ಚಳುವಳಿ ವಿದೇಶಿಗಳ ವಿರುದ್ಧವೇ ಹೊರತು ಭಾರತೀಯ ವಿರೋಧಿ ಅಥವಾ ಅಲ್ಪಸಂಖ್ಯಾತ ವಿರೋಧಿ ಅಲ್ಲವೆಂದು ಹೇಳಿಕೊಳ್ಳುತ್ತಾರೆ. ಆರೆಸ್ಸೆಸ್ ಮತ್ತು ಅದರ ರಾಜಕೀಯ ರಂಗವಾದ ಭಾರತೀಯ ಜನತಾ ಪಕ್ಷ, ಈ ಚಳುವಳಿ 'ರಾಷ್ಟ್ರೀಯ'ವಾದುದು 'ದೇಶಪ್ರೇಮಿ'ಯಾದುದು ಎಂದು ಸರ್ಟಿಫಿಕೇಟುಗಳನ್ನೂ ಕೊಡುತ್ತಿದೆ. ಆದರೆ ಚಳುವಳಿಕಾರರ ಕಾರ್ಯಕ್ರಮ ಮೂಲತಃ ಅಲ್ಪಸಂಖ್ಯಾತ ವಿರೋಧಿಯೂ, ಗುಂಪುಗಾರಿಕೆಯದೂ ಆಗಿದೆ. ಈಶಾನ್ಯ ಪ್ರದೇಶ ವಿದ್ಯಾರ್ಥಿ ಸಂಘ ತಯಾರಿಸಿದ "35 ಅಂಶಗಳ ಕಾರ್ಯಕ್ರಮ"ದಲ್ಲಿ ಅಮೆರಿಕ ಏಜೆಂಟರ ಕೈವಾಡ ಇದೆ. ಈ ಪ್ರದೇಶದಲ್ಲಿ ಗಲಭೆ ಹರಡಲು ಅವರು ಉತ್ಸುಕರಾಗಿದ್ದಾರೆ.

●

ಮುದ್ರಣ ಕಾರ್ಮಿಕಸಂಘದ ಸಭೆ

ದ. ಕನ್ನಡ ಜಿಲ್ಲೆಯ ಮುದ್ರಣಾಲಯ ಕಾರ್ಮಿಕ ಸಂಘದ 43ನೇ ಮಹಾಸಭೆಯು ತಾ. 1-6-80ರಂದು ಮಂಗಳೂರಿನಲ್ಲಿ ಜರುಗಿತು. ಕಾಂ. ಪಿ. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು. ಕಾಂ. ಮಿರಾಜ್‌ಕರರ ನಿಧನದ ಬಗ್ಗೆ ಸಂತಾಪ ಸೂಚಿಸಿದ ನಂತರ ಕಾರ್ಯದರ್ಶಿ ಬಿ. ಉಮಾನಾಥರು ವರದಿ ಒಪ್ಪಿಸಿದರು.

ಮುಂದಿನ ವರ್ಷಕ್ಕೆ ಕಾಂ. ಪಿ.ಆರ್. ಅಧ್ಯಕ್ಷರಾಗಿ, ಕಾಂ. ಭುಜಂಗ ಅವರು ಕಾರ್ಯದರ್ಶಿಯಾಗಿ, ಕಾಂ. ಜನಾರ್ಧನ ಖಜಾಂಚಿಯಾಗಿ ಚುನಾಯಿತರಾದರು.

ಆಯ್ಕೆಸಮಿತಿ ಮುಂದೆ ಇರುವ ಅಗತ್ಯ ಸೇವಾ ಮಸೂದೆಯನ್ನು ವಿರೋಧಿಸುವ ಮತ್ತು ಎಲ್ಲ ಚಳುವಳಿಗಳಲ್ಲಿ ಪ್ರೆಸ್ ಕಾರ್ಮಿಕರು ಭಾಗವಹಿಸುವ ಕರೆ ನೀಡುವ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಯಿತು. ಕಾಂ. ಸೂರಿಯವರ ಗಡೀಪಾರನ್ನು ರದ್ದುಪಡಿಸುವಂತೆ ಸರ್ಕಾರವನ್ನು ಒತ್ತಾಯಿಸಲಾಯಿತು. ಸಭೆಯನ್ನು ಉದ್ದೇಶಿಸಿ ಯು. ಪಿ. ಡಿಸೋಜ, ಸುಬ್ರಾಯ ನಾಯ್ಕ ಮತ್ತು ಕಾಂ. ಕೆ. ಮೂಸಬ್ಬ ಮಾತನಾಡಿದರು. ○

ರೇಷ್ಮೆ ಕಾರ್ಮಿಕರ ಶೋಷಣೆ

ರೇಷ್ಮೆ ಕೈಗಾರಿಕೆಯಲ್ಲಿ ದುಡಿಯುವ ಕಾರ್ಮಿಕರಿಗೆ ಪುನರ್ವಿಮರ್ಶಿತ ವೇತನವನ್ನು ನೀಡುವಂತೆ ಸರ್ಕಾರ ಆಜ್ಞೆ ನೀಡಿತ್ತು. ಆದರೆ ರೇಷ್ಮೆ ಕೈಗಾರಿಕೆಯ ಬಹುತೇಕ ಮಾಲೀಕರು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ ಕಾರ್ಮಿಕರನ್ನು ಶೋಷಿಸುತ್ತಿದ್ದಾರೆ. ಈ ಬಗ್ಗೆ ಸರ್ಕಾರಕ್ಕೆ ಎಷ್ಟು ಮನವಿಗಳನ್ನು ಸಲ್ಲಿಸಿದ್ದರೂ ಪ್ರಯೋಜನವಾಗಿಲ್ಲ. ಈ ಬಗ್ಗೆ ಕ್ರಮ ಕೈಗೊಂಡು ಪುನರ್ವಿಮರ್ಶಿತ ವೇತನವನ್ನು ಕೆಲಸಗಾರರಿಗೆ ದೊರೆಕಿಸಿಕೊಡಬೇಕೆಂದು ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್‌ನ ಶಿಡ್ಲಘಟ್ಟ ಶಾಖೆಯ ಕಾರ್ಯದರ್ಶಿ ಎನ್. ಮಣಿ ಒತ್ತಾಯಿಸಿದ್ದಾರೆ. ○

ಸಿ ಐ ಟಿ ಯು ಮೇಲೆ ಎ ಐ ಟಿ ಯು ಸಿ ನಡೆಸುವ ಅಪಪ್ರಚಾರ ನಿಲ್ಲಲಿ

ತಾರೀಕು 1-6-1980ರ ಜಂಬಾವುಟದಲ್ಲಿ 'ಸೀಟು ಸುಳ್ಳು ಪ್ರಚಾರ, ಎ. ಐ. ಟಿ. ಯು. ಸಿ. ಉತ್ತರ' ಎಂಬ ಶಿರೋನಾಮೆಯಲ್ಲಿ ಬರೆದಿರುವುದರಲ್ಲಿ ಸತ್ಯವನ್ನು ಮರೆ ಮಾಚುವ ಯತ್ನ ನಡೆದಿದೆ. ಸಿ. ಐ. ಟಿ. ಯು. ವಕ್ತಾರರು ಈ ಬಗ್ಗೆ ಈ ಕೆಳಗಿನ ವಿವರಣೆ ಇತ್ತಿರುವರು.

ಮೇ ದಿನಾಚರಣೆಯನ್ನು ಈ ಬಾರಿಯಾದರೂ ಒಂದಾಗಿ ನಡೆಸಬೇಕೆಂಬ ಅಭಿಪ್ರಾಯದಿಂದ ಸಿ. ಐ. ಟಿ. ಯು., ಎ. ಐ. ಟಿ. ಯು. ಸಿ. ಮತ್ತು ಎಚ್. ಎಂ. ಎಸ್.ನ ಪ್ರತಿನಿಧಿಗಳು ಭೇಟಿಯಾಗಿದ್ದರು. ಈ ಸಭೆಯಲ್ಲಿ ಅಫ್‌ಘಾನಿಸ್ತಾನದ ಪ್ರಶ್ನೆಯನ್ನೆ ಪ್ರಧಾನ ಅಂತರಾಷ್ಟ್ರೀಯ ವಿಷಯವನ್ನಾಗಿಟ್ಟುಕೊಂಡು ಮೇ ದಿನಾಚರಣೆಯನ್ನು ಆಚರಣೆ ಮಾಡಬೇಕೆಂಬುದು ಎ. ಐ. ಟಿ. ಯು. ಸಿ. ನಿರ್ಣಯ ಎಂಬುದಾಗಿ ಕಾಂ. ಎಮ್. ಎಸ್. ಕೃಷ್ಣನ್ ಅವರು ಹೇಳಿದ್ದರಿಂದ ಎಚ್. ಎಂ. ಎಸ್. ನಂತಹ ಸಂಘಟನೆಗಳಿಗೆ ಇದು ಒಪ್ಪಿಗೆಯಾಗುವುದು ಸಾಧ್ಯವಾಗದ್ದರಿಂದ ಜಂಟೀ ಮೇ ದಿನಾಚರಣೆಯ ಪ್ರಶ್ನೆಯನ್ನು ಕೈಬಿಡಲಾಯಿತು. ಇದನ್ನು ಓದುಗರಿಗೆ ತಿಳಿಸುವುದಕ್ಕೆ ಬದಲಾಗಿ ಸಿ. ಐ. ಟಿ. ಯು. ರಾಜ್ಯಸಮಿತಿ ಅಧ್ಯಕ್ಷ ಮತ್ತು ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ಕಾಂ. ಸೂರ್ಯನಾರಾಯಣರಾವ್ ಅವರಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಫ್‌ಘಾನಿಸ್ತಾನದ ನಿಲುಮೆ ಬಗ್ಗೆ ತಾನು ನೆನಪು ಮಾಡಿದೆನೆಂಬುದಾಗಿ ಕಾಂ. ಕೃಷ್ಣನ್ ಹೇಳಿರುವುದು ಹಾಸ್ಯಾಸ್ಪದ.

ಇನ್ನು ಐ. ಟಿ. ಸಿ. ಒಪ್ಪಂದದ ಬಗ್ಗೆ ಹೇಳುವುದಿದ್ದರೆ 1976ನೇ ಇಸವಿಯಲ್ಲಿ ಕಾಂ. ಎಂ. ಎಸ್. ಕೃಷ್ಣನ್ ಅವರೇ ಅಲ್ಲಿಯ ಸಂಘದ ಅಧ್ಯಕ್ಷರಾಗಿರುವಾಗ ಉತ್ಪಾದನೆಯನ್ನು ಆಧರಿಸಿ ಪ್ರತಿಫಲ ಸಿಗುವ ಒಪ್ಪಂದವನ್ನು ಮಾಡಿರುವುದು ಅವರು ಅಚ್ಚುಮಾಡಿಸಿರುವ ಒಪ್ಪಂದದ ಪುಸ್ತಕದಲ್ಲಿದೆ. "ಲಾಭವನ್ನು ಆಧರಿಸಿ ಕೊಡುವ ಬೋನಸ್ಸಿಗೆ ಬದಲಾಗಿ, ಉತ್ಪಾದನೆಯನ್ನು ಆಧರಿಸಿಬೋನಸ್" ಕೊಡುವ ಒಪ್ಪಂದಕ್ಕೆ ಕಾಂ. ಕೃಷ್ಣನ್ ಅವರು ಒಪ್ಪಂದ ಮಾಡಿರುವುದರ ಬಗೆಗೆ ವಿವರಣೆ ನೀಡಲಿ. "ಮಹಾಸಭೆಯಲ್ಲಿ ಚರ್ಚಿಸಿ ಒಪ್ಪಿಗೆ ಪಡೆದ ನಂತರವೇ ಸಹಿಹಾಕಿದ್ದು" ಎಂದು ಹೇಳಿ ತಮ್ಮ ಜವಾಬ್ದಾರಿ ಏನೆಂದು ಹೇಳುವುದರಿಂದ ಜಾರಿಕೊಳ್ಳುವುದಕ್ಕೆ ಪ್ರಯತ್ನಿಸಿದ್ದಾರೆ ಕೃಷ್ಣನ್ ಅವರು.

ಮಂಗಳೂರು ಹೆಂಚಿನ ಕಾರ್ಖಾನೆಯಲ್ಲಿ ತಮ್ಮವರೇ ಆದ ಉಮಾನಾಥ್‌ನಾಯಕ್‌ರವರು ಮಾಡಿರುವ ಒಪ್ಪಂದವನ್ನು ಸಿ. ಐ. ಟಿ. ಯು. ಮೇಲೆ ಹೊರಿಸಲು ಎ. ಐ. ಟಿ. ಯು. ಸಿ.ಯವರು ಮುಂದಾದಂತಿದೆ.

ಅಖಿಲಭಾರತ ಮಟ್ಟದಲ್ಲಿ ಎರಡೂ ಕಮ್ಯುನಿಸ್ಟ್ ಪಕ್ಷಗಳು ಹಾಗೂ ಸಾಮೂಹಿಕ ಸಂಘಟನೆಗಳು ಪರಸ್ಪರ ತಿಳುವಳಿಕೆಯಿಂದ ಹೋರಾಟ ನಡೆಸುತ್ತಿದ್ದಾರೆ. ಐಕ್ಯಹೋರಾಟದ ಅಗತ್ಯವನ್ನು ಇತ್ತೀಚಿನ ಚುನಾವಣೆಗಳು ಮತ್ತೊಮ್ಮೆ ಸ್ಪಷ್ಟಪಡಿಸಿವೆ. ಇಂತಹ ಸಂದರ್ಭದಲ್ಲಿ ಎ. ಐ. ಟಿ. ಯು. ಸಿ. ಮುಖಂಡರು ತಮ್ಮ ಪತ್ರಿಕೆಯಲ್ಲಿ ವೃಥಾಲಾಪಗಳನ್ನು ಪ್ರಕಟಿಸುವ ಬದಲು, ಸಮಸ್ಯೆಗಳಿದ್ದರೆ ಚರ್ಚಿಸಲಿ. ಸಿ. ಪಿ. ಐ. ಮತ್ತು ಸಿ. ಪಿ. ಐ.(ಎಂ) ಪಕ್ಷಗಳು ಹಾಗೂ ಅವುಗಳ ಸಾಮೂಹಿಕ ಸಂಘಟನೆಗಳ ಮಧ್ಯೆ ಸ್ನೇಹ ಬೆಳೆಸಲು, ಸಮಸ್ಯೆಗಳಿದ್ದರೆ ಸಮಾಲೋಚನೆ ನಡೆಸುವುದಕ್ಕೆ ಇದು ಸಕಾಲವೇ ವಿನಹ ಭಿನ್ನಾಭಿಪ್ರಾಯಗಳನ್ನು ಬೆಳೆಸುವುದಕ್ಕಲ್ಲ. ●

ಬಾಗಲಕೋಟೆ ನೂಲಿನ ಗಿರಣಿ ಕಾರ್ಮಿಕರ ಹೋರಾಟ

ಕರ್ನಾಟಕ ರಾಜ್ಯದ ಹತ್ತಿಗಿರಣಿ ಕಾರ್ಮಿಕರಿಗೆ ಜೀವನ ಸೂಚ್ಯಾಂಕ ಬೆಲೆಯೇರಿಕೆಗನುಸಾರ ತುಟ್ಟಿಭತ್ತೆ ಕೊಡಬೇಕೆಂದು ರಾಜ್ಯಸರಕಾರ ನೇಮಿಸಿದ ತ್ರಿಪಕ್ಷೀಯ ಸಮಿತಿ ಒಪ್ಪಿಕೊಂಡಿದ್ದು, ಅದರಂತೆ ತಮಗೆ ತುಟ್ಟಿಭತ್ತೆ ಸಿಗಬೇಕೆಂದು ಬಾಗಲಕೋಟೆ ಸಹಕಾರಿ ನೂಲಿನ ಗಿರಣಿ ಕಾರ್ಮಿಕರು 26-4-80ರಿಂದ ಮುಷ್ಕರ ನಡೆಸಿದ್ದಾರೆ. ಪೂರ್ವಭಾವಿ 15 ದಿವಸ ನೋಟೀಸು ಕೊಟ್ಟಿದ್ದರೂ ಮಾಲಕರಾಗಲೀ, ಕಾರ್ಮಿಕ ಅಧಿಕಾರಿಗಳಾಗಲೀ ಈ ಬೇಡಿಕೆ ಕುರಿತು ವಿಚಾರಣೆ ನಡೆಸಲಿಲ್ಲ. ಹೆಚ್ಚಿನ ತುಟ್ಟಿಭತ್ತೆ ಕೊಡುತ್ತೇವೆಂದು ಮಾಲಕವರ್ಗ ಹುಬ್ಬಳ್ಳಿಯ ಎ. ಎಲ್. ಸಿ. ಸಮಕ್ಷಮ ಒಪ್ಪಂದ ಮಾಡಿಕೊಂಡು ತಮ್ಮ ಬೋರ್ಡ್ ಮೀಟಿಂಗಿನಲ್ಲಿ ನಿರ್ಣಯ ಕೈಗೊಂಡು 2 ವರ್ಷವಾಯಿತು. ಸುದೀರ್ಘ ಮುಷ್ಕರ ನಡೆದಾಗ ಕಾರ್ಮಿಕ ಕಮೀಷನರೂ ಕೂಡ ಯೂನಿಯನಿನ ಬೇಡಿಕೆ ನ್ಯಾಯವಾದುದೆಂದು ಒಪ್ಪಿಕೊಂಡಿದ್ದಾರೆ. ಆದರೆ ಕಳೆದ ಒಂದುವರೆ ತಿಂಗಳಿನಿಂದ ಶಾಂತರೀತಿಯ ಹೋರಾಟ ನಡೆಯುತ್ತಿದ್ದರೂ ಮಾಲಕವರ್ಗ ನ್ಯಾಯವಾದ ಬೇಡಿಕೆ ಒಪ್ಪಿಕೊಳ್ಳಲು ನಿರಾಕರಿಸುತ್ತಿರುವಾಗ, ಸರಕಾರ ಮಧ್ಯಪ್ರವೇಶಿಸಿ ಬೇಡಿಕೆ ಕೊಡಿಸಬೇಕೆಂದು ರಾಜ್ಯ ಸಿ. ಐ. ಟಿ. ಯು. ಉಪಾಧ್ಯಕ್ಷ ಎನ್. ಕೆ. ಉಪಾಧ್ಯಾಯರು ಒತ್ತಾಯಮಾಡಿದ್ದಾರೆ. ●

ಗಡೀಪಾರು ಕ್ರಮಕ್ಕೆ ಆಟೋ ಚಾಲಕರ ಸಂಘದ ಖಂಡನೆ

ಕಳೆದ ಎರಡು ವರ್ಷಗಳಲ್ಲಿ ಸಿ.ಐ.ಟಿ.ಯು. ನೇತೃತ್ವದಲ್ಲಿ ಕಾರ್ಮಿಕವರ್ಗ ಸಾಕಷ್ಟು ಹೋರಾಟಗಳನ್ನು ನಡೆಸುತ್ತಿದೆ. ಮೈಕೋ ಕಾರ್ಮಿಕರನ್ನು ಒಗ್ಗೂಡಿಸಿ ಅವರ ನ್ಯಾಯಬದ್ಧ ಬೇಡಿಕೆಗಳ 88 ದಿನಗಳ ಹೋರಾಟಕ್ಕೆ ನಾಯಕತ್ವಕೊಟ್ಟ ಕಾಂ. ಎಸ್. ಸೂರ್ಯನಾರಾಯಣರಾವ್ ಅವರ ಮೇಲೆ ಸರ್ಕಾರದ ಮತ್ತು ಆಡಳಿತ ವರ್ಗದ ಕ್ರೂರದೃಷ್ಟಿ ಬೀಳುವುದು ಸಹಜ.

ಹೊಸವಸಾಹತುಶಾಹಿ ಜರ್ಮನರ ಮೈಕೋ ಕಾರ್ಖಾನೆಯೂ, ಬ್ರಿಟಿಷ್ ಸಾಮ್ರಾಜ್ಯಶಾಹಿಗಳ ಹಿಡಿತದಲ್ಲಿರುವ ಐ.ಟಿ.ಸಿ. ಕಾರ್ಖಾನೆಯೂ, ಅಮೆರಿಕನ್ ಸಾಮ್ರಾಜ್ಯಶಾಹಿಗಳ ಬೆಳಗಾವಿಯ ಇಂಡಾಲ್ ಕಾರ್ಖಾನೆಯೂ ದುಡಿಯುವ ಕಾರ್ಮಿಕರ ಹಕ್ಕುಗಳನ್ನು ದಮನಮಾಡಲು ಸರ್ಕಾರದ ಮೇಲೆ ಪರೋಕ್ಷ ಒತ್ತಡ ತರುತ್ತಿವೆ. ಕಾಂ. ಸೂರಿ ಮತ್ತು ಇತರ ಮುಖಂಡರ ಗಡೀಪಾರು ಆಜ್ಞೆಗೆ ಬಹುರಾಷ್ಟ್ರೀಯ ಸಂಸ್ಥೆಗಳ ಪಿತೂರಿಯೇ ಕಾರಣವಾಗಿದೆ. ಕೈಗಾರಿಕಾ ಬೆಳವಣಿಗೆಯ ಹೆಸರಿನಲ್ಲಿ ನಮ್ಮ ದೇಶದ ಸಂಪತ್ತನ್ನು ಕೊಳ್ಳೆಹೊಡೆಯುವ ಅವರು ನಮ್ಮ ನಾಗರಿಕರ ಹಕ್ಕುಗಳನ್ನು ನಾಶಪಡಿಸಲು ಯತ್ನಿಸುತ್ತಿದ್ದಾರೆ.

ಮೈಕೋ ಆಡಳಿತವರ್ಗ ಕೋಟ್ಯಾಂತರ ರೂಪಾಯಿಗಳನ್ನು ದೋಚಿ, ಆಟೋಮೊಬೈಲ್ ರಂಗದಲ್ಲಿ ಏಕಸ್ವಾಮ್ಯ ಸ್ಥಾಪಿಸಿಕೊಂಡಿದೆ. ಇಂಡಿಯನ್ ಟೊಬಾಕೋ ಕಂಪೆನಿಯಲ್ಲಿ ದಿನ ಒಂದಕ್ಕೆ 42 ಮಿಲಿಯ ಸಿಗರೇಟ್ ಉತ್ಪಾದನೆಯಾಗಿ, 42 ಲಕ್ಷ ರೂಪಾಯಿ ಎಕ್ಸೈಸ್‌ಕರ ಸರ್ಕಾರಕ್ಕೆ ಸಲ್ಲುತ್ತದೆ. ಕಳೆದ ಎರಡು ವರ್ಷದಲ್ಲಿ ಉತ್ಪಾದನೆ ಹೆಚ್ಚಾದರೂ ಕಾರ್ಮಿಕರ ವೇತನ ಹಿಂದಿನಂತೆಯೇ ಇದೆ. 60 ದಿನಗಳಿಂದ ಐ. ಟಿ. ಸಿ. ಕಾರ್ಮಿಕರು ಮುಷ್ಕರ ನಡೆಸುತ್ತಿದ್ದಾರೆ.

ಎಲ್ಲ ಕಾರ್ಮಿಕರೂ, ಸ್ವಾತಂತ್ರ್ಯ ಪ್ರೇಮಿಗಳೂ ಗಡೀಪಾರು ಕ್ರಮವನ್ನು ಖಂಡಿಸಿ, ಸರ್ಕಾರದ ಅಗತ್ಯಸೇವಾ ಮಸೂದೆಯನ್ನು ಪ್ರತಿಭಟಿಸಬೇಕೆಂದು ಆಟೋ ಚಾಲಕರ ಸಂಘ ವಿನಂತಿಸುತ್ತದೆ.

○

ಎಸ್.ಎಫ್.ಐ. ಯಿಂದ ಲಾಠಿ ಚಾರ್ಜಿನ ಖಂಡನೆ

ಹುಣಸಿಕೋಟೆ ದಲಿತ ಕೃಷಿ ಕೂಲಿಗಾರ ಕುಂಬಾರ ಶೇಷಗಿರಿಯಪ್ಪನ ಕೊಲೆಯ ಅಪಾದಿತರ ವಿರುದ್ಧ ಕ್ರಮತೆಗೆದುಕೊಂಡು ಶಿಕ್ಷೆವಿಧಿಸುವಂತೆ ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯವರು ಮುಖ್ಯಮಂತ್ರಿಯವರಿಗೆ ಮನವಿಪತ್ರ ಸಲ್ಲಿಸಲು ಬಂದಾಗ ವಿಧಾನಸೌಧದ ಬಳಿದ, ಸಂ. ಸ. ಕಾರ್ಯಕರ್ತರ ಮೇಲೆ ನಗರದ ಪೋಲೀಸರು ನಡೆಸಿದ ದೌರ್ಜನ್ಯವನ್ನು ಎಸ್. ಎಫ್. ಐ. ರಾಜ್ಯಶಾಖೆಯು ಖಂಡಿಸುತ್ತದೆ.

ಪ್ರಜಾವಾಣಿ ಪತ್ರಕರ್ತರಾದ ಶ್ರೀ ಇಂಧೂದರ ಹೊನ್ನಾಪುರ ಇವರ ಮೇಲೂ ಪೋಲೀಸರು ಲಾಠಿಚಾರ್ಜು ಮಾಡುವಂತೆ ಆದೇಶ ನೀಡಿದ ಚಿಕ್ಕಪೇಟೆ ಎ. ಸಿ. ಪಿ. ರಜಪೂತ್‌ರವರ ಮೇಲೂ ತಕ್ಷಣ ಕ್ರಮತೆಗೆದುಕೊಂಡು ಶಿಕ್ಷೆವಿಧಿಸಬೇಕೆಂದು ಎಸ್. ಎಫ್. ಐ. ಒತ್ತಾಯಿಸುತ್ತದೆ.

ಬೆಳಗ್ಗೆ ವಿಧಾನಸಭೆಯಲ್ಲಿ ದಲಿತರ ಹಿತರಕ್ಷಣೆಗಾಗಿ ಸಂಪುಟದ ಸಮಿತಿ ರಚಿಸುವುದಾಗಿ ಹೇಳಿರುವ ಗುಂಡೂರಾವ್ ಸರ್ಕಾರದ ಪೋಲೀಸರು ಅಂದು ಸಂಜೆಯೇ ದಲಿತರ ಮೇಲೆ ಅಮಾನುಷ ಹಲ್ಲೆ ನಡೆಸಿರುವುದನ್ನು ಗಮನಿಸಿದರೆ, ಜನತೆಯ ನ್ಯಾಯಯುತ ಹೋರಾಟಗಳನ್ನು ಮುರಿಯಲು ಪೋಲೀಸು ಇಲಾಖೆಗೆ ಸಂಪೂರ್ಣ ಅಧಿಕಾರ ನೀಡಿರುವುದು ಸ್ಪಷ್ಟವಾಗಿದೆ ಎಂದು ರಾಜ್ಯಸಮಿತಿ ಪ್ರಧಾನ ಕಾರ್ಯದರ್ಶಿ ಹೇಳಿಕೆ ಇತ್ತಿರುವರು.

○

ಕೋಣೆಗ್ರಾಮ ಕೃಷಿ ಕೂಲಿಗಾರರ ಸಭೆ

ದ. ಕ. ಜಿಲ್ಲಾ ಕುಂದಾಪುರ ತಾಲ್ಲೂಕು ಕೋಣೆಗ್ರಾಮದ ರೈತ ಸಂಘದ ನೇತೃತ್ವದಲ್ಲಿ ಕೃಷಿಕೂಲಿಗಾರರ ಸಭೆ ಜರಗಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಗಣೇಶ್ ಕಾರಂತ, ವಡೇರ ಹೋಬಳಿ ಇವರು ವಹಿಸಿದ್ದರು. ಮುಖ್ಯ ಅತಿಥಿಯಾಗಿ ಜಿಲ್ಲಾ ರೈತಸಂಘದ ಅಧ್ಯಕ್ಷ ಕಾಂ. ಅಬ್ರಹಾಂ ಕರ್ಕಡರವರು ವಹಿಸಿದ್ದರು.

ಸಭೆಯು ಪ್ರಾರಂಭದಲ್ಲಿ ಕಾಂ. ಆನಂದಭಂಡಾರಿಯವರು ಸ್ವಾಗತಿಸಿದರು. ಕೃಷಿಕೂಲಿಗಾರರ ಕೂಲಿ ಹೆಚ್ಚಳದ ಬಗ್ಗೆ ಚರ್ಚಿಸಲಾಯಿತು. ಮುಖ್ಯ ಅತಿಥಿ ಅಬ್ರಹಾಂ ಕರ್ಕಡರವರು ಕೃಷಿಕೂಲಿಗಾರರು ಒಗ್ಗಟ್ಟಾಗಿ ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಬೇಕು; ಕೃಷಿಕೂಲಿಗಾರರು ಕೂಲಿ ಹೆಚ್ಚಳದ ಬೇಡಿಕೆಯನ್ನು ಇಟ್ಟು ಹೋರಾಟ ಮಾಡುವುದರ ಜೊತೆಗೆ ರೈತರು ಬೆಳೆದ ಬೆಳೆಗೆ ನ್ಯಾಯವಾದ ಬೆಲೆಯನ್ನು ಸರಕಾರ ಒದಗಿಸಿಕೊಡಲು ಹೋರಾಟಮಾಡಬೇಕೆಂದು ಕರೆಯಿತ್ತರು.

ಮಹಿಳೆಯರನ್ನೆ ಹೊಂದಿದ 17 ಜನರ ತಾತ್ಕಾಲಿಕ ಕಾರ್ಯಕಾರಿ ಸಮಿತಿಯನ್ನು ಆಯ್ಕೆಮಾಡಲಾಯಿತು. ಕಾರ್ಯದರ್ಶಿಯಾಗಿ ಶ್ರೀಮತಿ ಪಾವಸ್ತಿನ್‌ಕರವಲ್, ಜತೆಕಾರ್ಯದರ್ಶಿ ಶ್ರೀಮತಿ ಸೀತ ಮತ್ತು ಅಕ್ಕಯ್ಯ ಹಾಡಿಮನೆ. ಸದಸ್ಯರಾಗಿ ಶೇಷಿ, ಚೆಂದು, ಲಕ್ಷ್ಮಿಗಾಣಿಗ, ಸದಿಯ ಪುಲಮೆನ್‌ಡಿಸೋಜ, ಸರಸ್ವತಿ ಆಚಾರ್ತಿ, ಮದ್ದು, ಅಕ್ಕಣಿ, ಸಿದ್ದುಬ್ಯಾ, ಮುಗ್ಗಿ ಡಿಸೋಜ ಲಕ್ಷ್ಮಿಬ್ಯಾ, ಅಕ್ಕಮ್ಮ ನಾಗು ಮತ್ತು ನೀಲು ಇವರನ್ನು ಆರಿಸಲಾಯಿತು. ಸಮಿತಿಯ ಸದಸ್ಯರು ಸಭೆಸೇರಿ, ಒಂದು ಆಳು ನೇಜಿಒಯ್ದು ನೆಟ್ಟಿದ್ದಕ್ಕೆ ಖಡ್ಡಾಯವಾಗಿ ಕೂಲಿ 2 ಸೇರು ಅಕ್ಕಿಯನ್ನು ಪಡೆಯಬೇಕು ಮತ್ತು ಕಳೆಕೀಳುವ ಸಂದರ್ಭದಲ್ಲಿ ಆಳೊಂದರ 1 ಸೇರು ಅಕ್ಕಿಯನ್ನು ಖಡ್ಡಾಯ ಕೂಲಿಪಡೆಯಲು ಹೋರಾಟಮಾಡಬೇಕೆಂದು ನಿರ್ಣಯಿಸಲಾಯಿತು.

●

ಕಡಿಮೆ ದರದಲ್ಲಿ ಪೆಟ್ರೋಲ್ ಒದಗಿಸಲು ಒತ್ತಾಯ

"ಒಂಭತ್ತು ರಾಜ್ಯಗಳಿಗೆ ವಿಧಾನ ಸಭಾ ಚುನಾವಣೆಗಳು ನಡೆದ ಬೆನ್ನಿನ ಹಿಂದೆಯೇ ಕೇಂದ್ರ ಸರಕಾರ ಪೆಟ್ರೋಲಿನ ಬೆಲೆಯನ್ನು ಶೇಕಡ 17ರಷ್ಟು ಏರಿಸಿದೆ. ಇದು ಆಟೋರಿಕ್ಷಾ ಚಾಲಕರ ಆದಾಯಕ್ಕೆ ತೀವ್ರ ಪ್ರತಿಕೂಲವನ್ನುಂಟುಮಾಡಿದೆ.

ಜನತೆ ಈಗಾಗಲೇ ತೆರಿಗೆ ಹೆಚ್ಚಳದ ಭಾರದಿಂದ ಬಗ್ಗಿಹೋಗಿದ್ದಾರೆ, ಮತ್ತೊಂದು ಭಾರವನ್ನು ಹೊರಲು ಅಸಮರ್ಥರಾಗಿದ್ದಾರೆ ಎಂಬುದನ್ನು ಆಟೋರಿಕ್ಷಾ ಚಾಲಕರ ಸಂಘ ಗಮನಿಸಿದೆ. ಪೆಟ್ರೋಲ್ ಬೆಲೆ ಏರಿಕೆಯಿಂದ ರಿಕ್ಷಾ ಬಾಡಿಗೆ ದರವನ್ನು ಏರಿಸುವುದನ್ನು ನಮ್ಮ ಸಂಘ ಸಮರ್ಥಿಸಬಹುದಾದರೂ ನಾವು ಬಾಡಿಗೆ ದರ ಏರಿಸಿ ಎಂದು ಕೇಳುವುದಿಲ್ಲ. ಬದಲು ಸರ್ಕಾರ ಸಹಾಯಧನ ನೀಡಿ ಹಳೆಯ ದರದಲ್ಲಿ ದಿನಕ್ಕೆ ಪ್ರತಿ ಆಟೋಗೆ 10 ಲೀಟರ್ ಪೆಟ್ರೋಲ್ ನೀಡಬೇಕೆಂದು ಒತ್ತಾಯಿಸುತ್ತೇವೆ.

ಈ ನಮ್ಮ ಸಕಾರಣವಾದ ಬೇಡಿಕೆಗೆ ಸಾರ್ವಜನಿಕರು ಸಂಪೂರ್ಣ ಬೆಂಬಲ ನೀಡುತ್ತಾರೆಂದು ಆಶಿಸುತ್ತೇವೆ. ಒಂದು ವೇಳೆ ಸರ್ಕಾರ ಬೇಡಿಕೆಯನ್ನು ಈಡೇರಿಸದಿದ್ದರೆ ಒಂದು ದಿನದ ಮುಷ್ಕರಕ್ಕೆ ಕರೆ ನೀಡಲು ಸಂಘ ಆಲೋಚಿಸುತ್ತಿದೆ ಎಂಬುದಾಗಿ ಬೆಂಗಳೂರು ನಗರ ಆಟೋರಿಕ್ಷಾ ಚಾಲಕರ ಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣ ರಾವ್ ಮತ್ತು ಕಾರ್ಯದರ್ಶಿ ಕಾಂ. ಸುಬ್ರಮಣಿಯವರು ಹೇಳಿಕೆ ಇತ್ತಿದ್ದಾರೆ.

○

ದಲಿತರ ಚರಿತ್ರಾರ್ಹ ಜಾತಾ

(3ನೇ ಪುಟದಿಂದ)

ಶೇಷಗಿರಿಯಪ್ಪ ಕೊಲೆಗೀಡಾದ ಸ್ಥಳದಲ್ಲಿ ಆತನ ಮಗಳು ಪಂಜಿಗೆ ಬೆಂಕಿ ಇಟ್ಟಳು. ಹತ್ತಿ ಉರಿಯುತ್ತಿದ್ದ ಪಂಜನ್ನು ಹಿಡಿದು ಜಾತಾದ ಮುಂದಿನ ಸಾಲಿನಲ್ಲಿ ಹೊರಟ ಅನುಸೂಯಮ್ಮನ ಮನಸ್ಸು ಹತ್ತಿ ಉರಿಯುತ್ತಲಿದ್ದದ್ದು ಆಕೆಯ ಮುಖ ಸ್ಪಷ್ಟಪಡಿಸಿತು. 'ಕರ್ನಾಟಕ ದಲಿತ ಸಂಘರ್ಷ ಸಮಿತಿ' ಬ್ಯಾನರನ್ನು ಹಿಡಿದುಕೊಂಡ ಇನ್ನೂರು ಜನ ಯುವಜನರು ಬೆಂಗಳೂರಿನತ್ತ ಹೆಜ್ಜೆ ಹಾಕತೊಡಗಿದರು. ಹುತಾತ್ಮ ಶೇಷಗಿರಿಯಪ್ಪನ ಸಮಾಧಿಯ ಬಳಿ ಎರಡು ನಿಮಿಷ ಮೌನವಹಿಸಿ ಗೌರವ ಸೂಚಿಸಿದ ಮೆರವಣಿಗೆಕಾರರು ಮುನ್ನಡೆದರು. ಭಯಗ್ರಸ್ಥರಾಗಿದ್ದ ಊರು ಜನರು ಕಲ್ಲಿನಂತೆ ನಿಂತು ಮೆರವಣಿಗೆ ನೋಡುತ್ತಿದ್ದರು. ಅದಾರ ರಕ್ಷಣೆಗೆಂದೋ ಎರಡು ವ್ಯಾನುಗಳಲ್ಲಿ ಬಂದಿದ್ದ ಪೋಲೀಸರು ಊರ ತುಂಬ ನಿಂತಿದ್ದರು,

ಶನಿಪೂಜೆ-ಶಂಬಪ್ಪ :

ಮೆರವಣಿಗೆಕಾರರನ್ನೆಲ್ಲಾ ಶನಿದೇವರ ಗುಡಿಗೆ ಕರೆದ ಒರ್ವ ಮಧ್ಯವಯಸ್ಕ. ಕಪ್ಪು ಮುಖದ ಮೇಲೆ ಕೆಂಪು ಕುಂಕುಮ. ವಿಪರೀತ ಹರಳೆಣ್ಣೆ ಒತ್ತಿದ್ದ ಉದ್ದನೆಯ ಕೂದಲುಗಳು. ಶನಿಪೂಜೆ ಮಾಡಿ ಮೆರವಣಿಗೆಕಾರರಿಗೆಲ್ಲಾ ಕಡ್ಲೇಪುರಿಕೊಟ್ಟ. ಜಾತಾ ಮುನ್ನಡೆದಾಗ ತಾನೂ ಜಾತಾದಲ್ಲಿ ಸೇರಿಕೊಂಡ. ಮಾತನಾಡಿಸಿದೆ. ಕೃಷ್ಣೇಗೌಡ ಈತನ ಹೆಂಡತಿಯನ್ನು ಬತ್ತಲೆಮಾಡಿ ಊರ ಮುಂದಿನ ಮರಕ್ಕೆ ಕಟ್ಟಿಹಾಕಿದ್ದ ಘಟನೆಯನ್ನ ಹೇಳಿಕೊಂಡ ಶಂಬಪ್ಪನ ಕಣ್ಣಲ್ಲಿ ನೀರು. 'ಬೆಂಗಳೂರುವರೆಗೆ ನಡದು ಬರುತ್ತೀಯ' ಎಂದು ಅವನ ಬಡಕಲು ದೇಹವನ್ನು ದಿಟ್ಟಿಸುತ್ತಾ ಕೇಳಿದೆ. 'ಆತನಿಗೆ ಶಿಕ್ಷೆಯಾಗುವವರೆಗೆ ಎಲ್ಲಿಗೆಬೇಕಾದರೂ ಬರಲು ಸಿದ್ದ' ಎಂದನಾತ.

ಮುಂದೆ ಸಿಕ್ಕಿದ್ದು ಟೇಕಲ್ ಎಂಬ ದೊಡ್ಡ ಊರು. ಅಂದು ಸೋಮವಾರ. ಆ ಊರಿಗೆ ಅದು ಸಂತೆಯ ದಿನ. ತಾವು ಬೆಳೆದದ್ದನ್ನು ಮಾರಿ ತಮಗೆ ಬೇಕಾದುದನ್ನು ಕೊಳ್ಳಲು ಬಂದ ರೈತರು, ದಿನಸಿಕೊಳ್ಳಲು ಬಂದಿದ್ದ ಕೂಲಿಕಾರರು ತುಂಬಿದ್ದರು ಅಲ್ಲಿ. ಅಲ್ಲೊಂದು ಸಾರ್ವಜನಿಕ ಸಭೆ. ಸಭೆಯ ಅಧ್ಯಕ್ಷತೆ ವಹಿಸಿದ್ದವರು ದಲಿತ ಸಂಘರ್ಷ ಸಮಿತಿ ಹಾಸನ ಶಾಖೆಯ ಸಂಚಾಲಕ ತ್ಯಾಗಿ ದಲಿತರ ಮೇಲಾದ ದಬ್ಬಾಳಿಕೆಯನ್ನು ವಿರೋಧಿಸಿ ಮತ್ತು ಜಾತಾಕ್ಕೆ ತಮ್ಮ ಬೆಂಬಲ ವ್ಯಕ್ತಪಡಿಸಿ ಮಾತನಾಡಿದವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಘಟಕದ ನಾಯಕರು. ಬೆಂಗಳೂರು ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಪಿ. ಜಗನ್ನಾಥ್ ಅವರು ಜಾತವನ್ನ ಹಿಂಬಾಲಿಸಿಕೊಂಡು ವ್ಯಾನಿನಲ್ಲಿ ಬರುತ್ತಿದ್ದ ಪೋಲೀಸರನ್ನ ತರಾಟೆಗೆ ತೆಗೆದ್ಕೊಂಡರು. ಪೋಲೀಸರನ್ನು ಕಳುಹಿಸಿದ್ದ ಸರ್ಕಾರದ ಮೇಲೆ ಕಿಡಿದಂತಹ ಕಟುನುಡಿಗಳನ್ನಾಡಿದ ಜಗನ್ನಾಥರ ಮಾತುಗಳು ಮೆರವಣಿಗೆಕಾರರಿಗೆ ಖುಷಿಕೊಟ್ಟವು.

ಬಂಡುಕೋರ ಮುಸ್ಲಿಂನ ಆಶ್ರಯ :

ಮುಂದೆ ಸಿಕ್ಕ ಊರು ಪಂಡಸೆಟ್ಟಿಹಳ್ಳಿ. ಮುಸ್ಲಿಂರೇ ಅಧಿಕವಾಗಿರುವ ಈ ಊರಿನಲ್ಲಿ ಆ ರಾತ್ರಿ ತಂಗಬೇಕಾಗಿತ್ತು. ಮೆರವಣಿಗೆಕಾರರಿಗೆ ಆಶ್ರಯ ಕೊಡಲು ಅಲ್ಪಸಂಖ್ಯಾತರಾದ ಮುಸ್ಲಿಂರು ಅಂಜಿದರು. ಇವರಲ್ಲೇ ಒಬ್ಬ ಬಂಡಾಯಗಾರ ಮುಸ್ಲಿಂ ದಲಿತರಿಗೆ ಆಶ್ರಯಕೊಟ್ಟ. ಈ ಊರಿನಲ್ಲಿ ಸಾರ್ವಜನಿಕ ಸಭೆ ಮತ್ತು ಭಾಷಣಗಳಿಲ್ಲ. ವಿವಿಧ ದಲಿತ ಕವಿಗಳು ಬರೆದ ಹಾಡುಗಳನ್ನು ಹಾಡಿದರು. ಶೇಷಗಿರಿಯಪ್ಪನ ಕೊಲೆ ಎಂಬ ನಾಟಕವನ್ನು ಜಾತಾದ ಪ್ರತಿನಿಧಿಗಳು ಅಭಿನಯಿಸಿದರು.

ಬೆಂಗಳೂರು ಕಡೆ ದಾರಿ ಸವೆಯುತ್ತಿತ್ತು. ತನ್ನ ಹೆಸರಿಗೆ ತಕ್ಕಂತೆಯೇ ಕುಂತೂರು ಎಂಬ ಪುಟ್ಟಗ್ರಾಮ ಮೆರವಣಿಗೆಕಾರರನ್ನು ತನ್ನ ತಂಪಾದ ಮಾವಿನ ತೋಪಿನಲ್ಲಿ ಕೂರಿಸಿಕೊಂಡಿತು. ಮಾವಿನತೋಪಿನಲ್ಲಿ ಅಭಿನಯಿಸಲ್ಪಟ್ಟ ನಾಟಕವನ್ನು ನೋಡಿದವರಲ್ಲಿ ಬಹುಪಾಲು ಆ ಹಳ್ಳಿಯ ಹೆಂಗಸರು. ಶೇಷಗಿರಿಯಪ್ಪನ ಕೊಲೆಗೆ ಕಣ್ಣೀರು ಹಾಕಿದ ಈ ಹೆಂಗಸರು ದಲಿತ ಸಂಘರ್ಷ ಸಮಿತಿಯ ಜಾತಾಗೆ ಸಕ್ರಿಯ ಬೆಂಬಲಕೊಟ್ಟದ್ದು ತಮ್ಮ ಎಲೆ ಅಡಿಕೆ ಚೀಲಗಳಿಂದ ಪುಡಿಗಾಸುಗಳನ್ನು ತೆಗೆದುಹಾಕುವ ಮೂಲಕ.

ಮಾಲೂರು ಜನತೆಯ ಮನ ಮುಟ್ಟಿದ ಮಾತುಗಳು :

ಕಾಂಗ್ರೈ ನಾಯಕ ಜಮೀನ್ದಾರ್ ಕೃಷ್ಣೇಗೌಡ ಯಾವ ತಾಲ್ಲೋಕ್ ಬೋರ್ಡ್ನ ಅಧ್ಯಕ್ಷನಾಗಿದ್ದಾನೋ ಆ ತಾಲ್ಲೋಕು ಕೇಂದ್ರ ಮಾಲೂರಿಗೆ ಜೂನ್ 10ರಂದು ಸಂಜೆ ಐದಕ್ಕೆ ದಲಿತರ ಜಾತಾ ಆಗಮಿಸಿತು. ಪಟ್ಟಣದ ಮುಖ್ಯ ಬೀದಿಗಳಲ್ಲಿ ಸಂಚರಿಸಿತು. ಕೃಷ್ಣೇಗೌಡನ ಕೊಲೆಗಡುಕ ಕೃತ್ಯಗಳನ್ನು ಜನತೆಗೆ ಕೂಗಿಕೂಗಿ ಹೇಳಿತು. ಅರ್ಥವಾದ ಜನ ಆಲೈಸಿದರು. ಅರ್ಥವಾಗದಿದ್ದ ಜನ (ವಿಶೇಷವಾಗಿ ಮಹಿಳೆಯರು) ಬೆರಗುಗಣ್ಣುಗಳಿಂದ ನೋಡುತ್ತಿದ್ದರು.

ಮಾಲೂರಿನ ಮುಖ್ಯ ವೃತ್ತದಲ್ಲಿ ಸಾರ್ವಜನಿಕ ಸಭೆ. ಸಭೆಯನ್ನು ಉದ್ದೇಶಿಸಿ ಮಾತನಾಡಿದ ದಲಿತ ಕವಿ ಶೇಷಗಿರಿಯಪ್ಪ ಕೊಲೆಯಾದ ಪರಿಸ್ಥಿತಿ ಮತ್ತು ಕಾರಣಗಳನ್ನು ವಿವರಿಸಿದರು. ಕೊಲೆಗಡುಕನೊಬ್ಬನಿಗೆ ಮುಂಜಾಗರೂಕತಾ ಜಾಮೀನುಕೊಟ್ಟ ನಮ್ಮ ನ್ಯಾಯಾಂಗ ವ್ಯವಸ್ಥೆಯನ್ನು ಅವರು ಗೇಲಿಮಾಡಿದರು. ದಲಿತ ಸಂಘರ್ಷ ಸಮಿತಿಯು ಮೇಲ್ಜಾತಿ ಮತ್ತು ಮೇಲುವರ್ಗದವರ ಅಧಿಕಾರದ ವಿರುದ್ಧ ಹೋರಾಡುತ್ತದೆಂದು ಸಾರಿದರು ಸಿದ್ಧಲಿಂಗಯ್ಯ. ಈ ವ್ಯವಸ್ಥೆಯ ನಿಯಂತ್ರಕರಾದ ಜಮೀನ್ದಾರರು ಮತ್ತು ಬಂಡವಾಳಗಾರರು ಅಪರಾಧ ಮಾಡಿದರೂ ಶಿಕ್ಷೆ ಕೊಡದ ಕೋರ್ಟುಗಳನ್ನು ಕುರಿತು ಹೇಳಿದರು 'ಜನ ನಿಮ್ಮಿಬ್ಬರಿಗೆ ಶಿಕ್ಷೆ ಕೊಡುತ್ತಾರ' ಎಂದು. ಈಗಿರುವ ಸಿರಿವಂತರ ಪರವಾದ ಸರ್ಕಾರವನ್ನು ಕಿತ್ತು ಅದರ ಸ್ಥಾನದಲ್ಲಿ ಬಡಜನರಾದ ನಿಮ ಸರ್ಕಾರವನ್ನು ಅಸ್ತಿತ್ವಕ್ಕೆ ತನ್ನಿ ಎಂದು ನೆರೆದಿದ್ದ ನೂರಾರು ಬಡಜನರನ್ನು ಕೇಳಿಕೊಂಡರು ಸಿದ್ಧಲಿಂಗಯ್ಯ.

ಕನ್ನಡ ಭಾಷೆ, ಸಾಹಿತ್ಯ ಮತ್ತು ಕಪ್ಪು ಜನತೆಯ ಆಸ್ತಿಯಾಗಿರುವ ಬರಹಗಾರ ದೇವನೂರು ಮಹದೇವ ಅವರು ಮಾತನಾಡಿ ಬಡಜನತೆಯ ಹೋರಾಟದಲ್ಲಿ ಎಲ್ಲ ಬಡಜನರೂ ಸೇರಿಕೊಳ್ಳಬೇಕೆಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಲಿತ ಸಂಘರ್ಷ ಸಮಿತಿಯ ರಾಜ್ಯ ಸಂಚಾಲಕ ಬಿ. ಕೃಷ್ಣಪ್ಪನವರು ಮಾತನಾಡಿ ಎಲ್ಲ ಮತಧರ್ಮಗಳಲ್ಲಿರುವ ಬಡಜನರೇ ದಲಿತರೆಂದರು. ತಮ್ಮ ಸಂಘಟನೆಯ ಹೋರಾಟ ಗೌಡರ ವಿರುದ್ಧವಲ್ಲ-ಜಮೀನುದಾರರ ಮತ್ತು ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ಎಂದರು. ಮುಂದೆ ಆಗಬಹುದಾದ ಬಡಜನರ ಕೊಲೆಗಳ ತಡೆಗೆ ಮತ್ತು ಬಡವರ ಉಳಿಗಾಲಕ್ಕಾಗಿ ಸಂಘರ್ಷ ಸಮಿತಿ ಜಾತಾ ವ್ಯವಸ್ಥೆಮಾಡಿದೆ ಎಂದೂ ಅವರು ವಿವರಣೆ ನೀಡಿ ಸರ್ವರ ಸಹಕಾರ ಕೋರಿದರು.

ಹಗಲು-ರಾತ್ರಿ ದಾರಿ ಸವೆಸುತ್ತಾ ಬೆಂಗಳೂರು ಕಡೆಗೆ ಬಂದ ದಲಿತರ ಜಾತಾಕ್ಕೆ ನೂರಾರು ಜನ ಅಡ್ಡ ಸಿಕ್ಕಿದರು. ಅವರಿಗೆಲ್ಲ ಕರಪತ್ರಗಳ ಹಂಚಿಕೆ. ಹೊಸಕೋಟೆಗೆ ಮೂರು ಮೈಲಿ ದೂರದಲ್ಲಿ ಜಾತಾ ಬರುತ್ತಲಿತ್ತು ತನ್ನೆಲ್ಲ ಸಿಟ್ಟಿನ ಘೋಷಣೆಗಳೊಡನೆ-ನೋವಿನ ಹಾಡುಗಳೊಡನೆ. ನೆಲವನ್ನು ಹಾಸಿಕೊಂಡು, ಆಕಾಶವನ್ನು ಹೊದ್ದುಕೊಂಡು ತನ್ನ ಕೈಯನ್ನೇ ತಲೆದಿಂಬನ್ನಾಗಿ ಮಾಡಿಕೊಂಡು, ಸುಡುಬಿಸಿಲಿನಲ್ಲಿ ಸ್ವಲ್ಪವೇ ಸ್ವಲ್ಪ ನೆರಳು ಕೊಡುತ್ತಿದ್ದ ಸರ್ವೆ ಮರಗಳಡಿ ರೈತನೊಬ್ಬ ಮಲಗಿದ್ದ. ದಲಿತರ ನೋವಿನ ಹಾಡುಗಳು-ಸಿಟ್ಟಿನ ಘೋಷಣೆಗಳು ಈತನನ್ನು ಎಚ್ಚರಿಸಿದವು. ಎದ್ದು ಬಂದವನಿಗೆ ಕರಪತ್ರ ಕೊಟ್ಟರು. ಮಡಿಚಿ ಜೇಬಿನಲ್ಲಿಟ್ಟುಕೊಂಡ ಆತ ಅವಿದ್ಯಾವಂತನೆಂದು ಸುಲಭವಾಗಿ ಗ್ರಹಿಸಿದೆವು ನಾವು.

ಅಂಬೇಡ್ಕರ್ ಸಂಘದವರಿಂದ ಹೊಸಕೋಟೆಯಲ್ಲಿ ಜಾತಾದ ಪ್ರತಿನಿಧಿಗಳ ಊಟದ ವ್ಯವಸ್ಥೆ. ದಲಿತರ ಕಾಲೋನಿಯಲ್ಲೇ ವ್ಯವಸ್ಥಿತವಾಗಿದ್ದ ಈ ಕಾರ್ಯದಲ್ಲಿ ಅಲ್ಲಿನ ದಲಿತರದು ಅತ್ಯುತ್ಸಾಹದ ಪಾಲ್ಗೊಳ್ಳುವಿಕೆ ಎದ್ದು ಕಾಣುತ್ತಿತ್ತು. ಹೊಸಕೋಟೆಯ ಮಧ್ಯಭಾಗಕ್ಕೆ ಬಂದಾಗ ದೇವನೂರ ಮಹಾದೇವ ನನ್ನನ್ನು ಕರೆದರು. ಮೈಸೂರು ಬಳಿಯ ತಗಡೂರು ದಲಿತರ ಹೋರಾಟದ ಪರವಾದ ಒಂದು ತೀರ್ಪು ಬೆಂಗಳೂರಿನ ಹೈಕೋರ್ಟಿನಿಂದ ಬಂದಿದೆ ಎಂಬ ಸಂತಸದ ಸುದ್ದಿ ತಿಳಿಸಿದರು. ಆ ತೀರ್ಪಿನ ಕಾಪಿಯನ್ನು ಅರ್ಜೆಂಟಾಗಿ ತರಲು ನೀನು ಬೆಂಗಳೂರಿಗೆ ಹೋಗಬೇಕೆಂದರು. ನಲವತ್ತು ವರ್ಷಗಳಿಂದ ನಿಲ್ಲಲು ನೆಲೆಗಾಗಿ ಪರದಾಡಿದವರ ಕೆಲಸ ಆಗಿದ್ದರ ಬಗ್ಗೆ ಮಹದೇವರಿಗೆ ನೆಮ್ಮದಿ. ಆದಷ್ಟು ಬೇಗ ಅಲ್ಲಿನ ದಲಿತರಿಗೆ ಹಕ್ಕುಸಿಕ್ಕಬೇಕೆಂಬುದು ಅವರ ಕಳಕಳಿ. ಅವರು ವಹಿಸಿದ ಕೆಲಸ ಒಪ್ಪಿಕೊಂಡು ಜಾತಾವನ್ನು ತಾತ್ಕಾಲಿಕವಾಗಿ ಬಿಟ್ಟು ಬೆಂಗಳೂರು ಬಸ್ ಹತ್ತಿದೆ.

ಸಮತಾ ಸಮ್ಮೇಳನದಲ್ಲಿ ಮಾರ್ಕ್ಸಿಸ್ಟರ ಮೇಲೆ ಮಾತುಕತೆ:

ದಲಿತರ ಪರ ವಕಾಲತ್ತು ವಹಿಸಿದ್ದವರು ಹಳೆಯ ಸಮಾಜವಾದಿ ಪಕ್ಷದ ಗೆಳೆಯ ರವಿವರ್ಮ ಕುಮಾರ್. ಜೂನ್ 11 ರಂದು ಬೆಂಗಳೂರಿನಲ್ಲಿ ಜರುಗುತ್ತಲಿದ್ದ ಅಖಿಲ ಭಾರತ ಸಮಾಜವಾದಿಗಳ ಸಮತಾ ಸಮ್ಮೇಳನದಲ್ಲಿ ರವಿ ಪಾಲ್ಗೊಂಡಿದ್ದರು. ಸಮ್ಮೇಳನದ ಸಭಾಂಗಣಕ್ಕೇ ಹೋದೆ. ಊಟದ ನಂತರದ ಸಮಯ ಅದು. ಎಲ್ಲರೂ ಸಿಗರೇಟು ಸೇದುತ್ತಾ, ಎಲೆ ಅಡಿಕೆ ಜಗಿಯುತ್ತಾ ವಿಶ್ರಾಂತಿ ಪಡೆಯುತ್ತಿದ್ದರು. ನನಗೆ ವಿಪರೀತ ಹಸಿವು. ಸಮ್ಮೇಳನದ ಆವರಣದಲ್ಲಿ ಪ್ರತಿನಿಧಿಯ ಬ್ಯಾಡ್ಜ್ ಧರಿಸಿ ನಿಂತಿದ್ದ ಗೆಳೆಯ ಶೂದ್ರ ಶ್ರೀನಿವಾಸನನ್ನು 'ಊಟ ಕೊಡಿಸ್ತೀಯ' ಎಂದೆ. 'ಬಾ ಹೋಗೋಣ' ಎಂದು ಪ್ರೀತಿಯಿಂದ ಕರೆದ. ರವಿಯವರು ಸ್ಥಳೀಯರಾದದ್ದರಿಂದ ಅಡಿಗೆ ಮನೆಯ ಕಡೆ ಇರಬಹುದೆಂದು ಅತ್ತ ಹೋದೆ. ಒಂದಿಬ್ಬರು ಊಟ ಮಾಡುತ್ತಿದ್ದರು. 'ನನಗೂ ಊಟ ಹಾಕುತ್ತೀರ' ಎಂದೆ. 'ಕುಂತ್ಕೊಳ್ಳಿ ಸಾರ್' ಎಂದರು. ಊಟ ಮಾಡುತ್ತಲಿದ್ದೆ. ಹಾಸನದ ಗೆಳೆಯ ಸುಬ್ರಮಣ್ಯಂ ಮತ್ತು ಕೊಣಂದೂರು ವೆಂಕಪ್ಪನವರೂ ಊಟಕ್ಕೆ ಬಂದು ಕುಳಿತರು ಮಾರ್ಕ್ಸ್‌ವಾದಿಯೊಬ್ಬ ಸಮತಾ ಸಮ್ಮೇಳನದಲ್ಲಿ ಊಟಕ್ಕೆ ಕುಳಿತಿರುವುದು ಅವರಿಗೆ ಆಶ್ಚರ್ಯ. ಮಾತು ರಾಜಕೀಯದೆಡೆಗೇ ಹರಿಯಿತು. 'ಸಮಾಜವಾದಿಗಳಿಗೆ ಕಾಣುವುದು ಇಬ್ಬರೆ, ಒಬ್ಬರು ಮಾರ್ಕ್ಸಿಸ್ಟರು ಮತ್ತೊಬ್ಬರು ಆರ್.ಎಸ್.ಎಸ್.ನವರು. ಇಬ್ಬರೂ ಶಿಸ್ತಿನಿಂದ ಕೆಲಸಮಾಡಿಕೊಂಡು ಹೋಗುತ್ತಿದ್ದಾರೆ. ಸಮಾಜವಾದಿಗಳು ಯಾರ ಕಡೆ ನಿಲ್ಲಬೇಕೆಂಬುದೇ ಪ್ರಶ್ನೆ' ಎಂದೆಲ್ಲಾ ಹೇಳುತ್ತಿದ್ದರು. ನಮ್ಮ ಎದುರಿಗೆ ಕುಳಿತಿದ್ದ ಮುಸುರೆ ತೊಳೆಯುವ ಮಹಿಳೆಯರಿಗೆ ನಮ್ಮ ಯಾವ ಮಾತುಗಳೂ ಅರ್ಥವಾಗುತ್ತಿರಲಿಲ್ಲ. ಊಟ ಮುಗಿಸಿ ಈಚೆಗೆ ಬಂದಾಗ ಪ್ರೊ. ನಂಜುಂಡಸ್ವಾಮಿ ಕಾಣಿಸಿದರು. ನಮಸ್ಕಾರ ಮಾಡಿದೆ ದೂರದಿಂದಲೇ. ತಮ್ಮ ಸುತ್ತಲೂ ಕುಳಿತಿದ್ದ ಯುವಕರಿಗೆ ನನ್ನನ್ನು ತೋರಿಸಿದರು.! 'ಶೂದ್ರರ ಹುಡುಗನೊಬ್ಬ ಮಾರ್ಕ್ಸ್‌ವಾದಿ ಕಮ್ಯುನಿಸ್ಟರ ಜೊತೆಗಿದ್ದಾನೆ.' ಅವರು ಹೇಳಿರಬಹುದಾದ ಈ ಮಾತುಗಳನ್ನು ಆಲಿಸಿದ ಆಯುವಕರು ಆಸೆಗಣ್ಣುಗಳಿಂದ, ಪ್ರೀತಿಯಿಂದ ನನ್ನತ್ತ ನೋಡಿದರು.

ದಲಿತರ ವಕಾಲತ್ತು ವಹಿಸಿದ್ದ ವಕೀಲ ರವಿಯೂ ಅಲ್ಲಿಗೆ ಆಗಮಿಸಿದರು. ವಿಷಯ ತಿಳಿಸಿದೆ. ಅಧಿಕಾರಶಾಹಿಯ ನಿಧಾನಗತಿಯ ತಮ್ಮ ಅನುಭವ ಹೇಳಿದರು. ಇಲ್ಲೇ ಕಾಯ್ದರೆ ಪ್ರಯೋಜನವಿಲ್ಲವೆಂದು ಕೃಷ್ಣರಾಜಪುರದ ಬಸ್ಸಿಗೆ ಹತ್ತಿದೆ. ಬೆಂಗಳೂರಿನ ಮುಖ್ಯ ಕೈಗಾರಿಕಾ ಪ್ರದೇಶವಾಗಿ ಬೆಳೆದು ಬರುತ್ತಲಿರುವ ಕೃಷ್ಣರಾಜಪುರಕ್ಕೆ ಐದು ಗಂಟೆಗೆ ಬರಬೇಕಿದ್ದ ಜಾತ ಏಳುವರೆಗಂಟೆಗೆ ಬಂತು. ಜಾತವನ್ನು ಸ್ವಾಗತಿಸಿ ಜಾತಾದಲ್ಲಿ ಸೇರಿಕೊಂಡಿದ್ದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮತ್ತು ಸಿ.ಐ.ಟಿ.ಯು.ವಿನ ನೂರಾರು ಕಾರ್ಯಕರ್ತರು ತಮ್ಮ ಕೆಂಬಾವುಟಗಳೊಡನೆ ದಲಿತ ಪ್ರತಿನಿಧಿಗಳೊಡನೆ ಹೆಜ್ಜೆ ಹಾಕುತ್ತಿದ್ದರು.

'ಮಂತ್ರಿ-ಶಾಸಕರಿಗೆ ಮಾಲೆ ಹಾಕಿ'

ನಮ್ಮ ಕಷ್ಟಸುಖಗಳ ವಿಚಾರಣೆಯ ಮಾತುಕೊಟ್ಟು ನಮ್ಮಿಂದ ಆಯ್ಕೆಯಾಗಿ ಶಾಸನಸಭೆಗೆ-ಲೋಕಸಭೆಗೆ ಹೋದ ಮತ್ತು ಮಂತ್ರಿಗಳೂ ಆದಿರುವ ಯಾರೊಬ್ಬರೂ ಕುಂಬಾರ ಶೇಷಗಿರಿಯಪ್ಪನನ್ನು ಮಾತನಾಡಿಸುವುದಿರಲಿ; ಆತನ ಕಗ್ಗೊಲೆ ನಡೆದರೂ ಕಣ್ಣೀರು ಹಾಕದ ಮಂತ್ರಿಶಾಸಕರನ್ನು ಕೃಷ್ಣರಾಜಪುರದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಹೀಗಳೆದವರು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿಯ ಕಾರ್ಯದರ್ಶಿ ಎಂ. ಕೆ. ಭಟ್. ಜನತೆಯ ಸುಖದುಃಖಗಳನ್ನು ಕೇಳದ ಈ ಮಂತ್ರಿಶಾಸಕರಿಗೆ ಹೂಮಾಲೆಗೆ ಬದಲಾಗಿ ಚಪ್ಪಲಿ ಮಾಲೆ ಹಾಕಿ ಎಂದು ಅಲ್ಲಿ ಸೇರಿದ್ದ ಸಾವಿರಾರು ಜನತೆಗೆ ಎಂ. ಕೆ. ಸಲಹೆ ಮಾಡಿದರು.

ರಾಜ್ಯದಲ್ಲಿ ನಡೆಯುತ್ತಿರುವ ಬಡಜನರ ನ್ಯಾಯವಾದ ಹೋರಾಟಗಳನ್ನು ಬಗ್ಗುಬಡಿಯುತ್ತಿರುವ ವಿವರಗಳನ್ನು ನೀಡಿದ ಸಿ ಪಿ ಎಂ. ಕಾರ್ಯದರ್ಶಿಗಳು ಪ್ರಸ್ತುತ ಆರ್ಥಿಕ-ಸಾಮಾಜಿಕ ವ್ಯವಸ್ಥೆಯಲ್ಲಿ ಬಡವರಿಗೇ ಒಂದು ನ್ಯಾಯ, ಸಿರಿವಂತರಿಗೇ ಒಂದು ನ್ಯಾಯ ಎಂಬುದೇ ಎರಡು ನ್ಯಾಯಗಳಿವೆ ಎಂದರು. ಶೋಷಕರನ್ನು ಬಂಧಿಸದ, ಗಡೀಪಾರು ಮಾಡದ ರಾಜ್ಯ ಸರ್ಕಾರ ದುಡಿಯುವ ಜನತೆಯ ನಾಯಕರ ಗಡೀಪಾರಿಗೆ ಹೊರಟಿದೆ ಎಂದು ಖಂಡಿಸಿದರು.

ದಲಿತರಿಗೆ ಈ ದೇಶದಲ್ಲಿ ಅದಾವ ಸ್ವಾತಂತ್ರ್ಯ ಸಿಕ್ಕಿದೆ ಎಂದು ಪ್ರಶ್ನಿಸಿದ ಎಂ.ಕೆ., ಶೇಷಗಿರಿಯಪ್ಪನ ಕೊಲೆ ಪ್ರಕರಣದಲ್ಲಿ ಮೌನವಹಿಸಿದ್ದ ಪೋಲೀಸರ ಕ್ರಮವನ್ನು ಉಗ್ರವಾಗಿ ಟೀಕಿಸಿದರು. ನಾಡಿನುದ್ದಗಲಕ್ಕೂ 22470 ಅಸ್ಪೃಶ್ಯತಾ ಅಪರಾಧಗಳು ಇದುವರೆಗೆ ದಾಖಲಾಗಿವೆ ಎಂಬ ಅಂಕಿಅಂಶ

(ಕಡೇ ಪುಟ ನೋಡಿ)

ಪ್ರಜಾಸತ್ತೆ, ಜನತೆಯ ಜೀವನವನ್ನು ರಕ್ಷಿಸಲು ಕರೆ

[ಒಂದನೇ ಪುಟದಿಂದ]

ಇಯಿತು. ಏಕಪಕ್ಷ ಆಡಳಿತದ ಬೆಂಬಲಿಗರಿಗೆ ದೊಡ್ಡ ಆಘಾತವನ್ನುಂಟು ಮಾಡಿದ ಎ.ಐ.ಡಿ.ಎಂ.ಕೆ., ವಾಮ ಪಕ್ಷಗಳು ಮತ್ತು ತಮಿಳುನಾಡಿನ ಜನತೆಯನ್ನು ಪೊಲಿಟ್‌ಬ್ಯೂರೋ ಅಭಿನಂದಿಸುತ್ತದೆ.

ಪಂಜಾಬಿನಲ್ಲಿ ಕಾಂಗ್ರೆ ಸೋಲನ್ನು ತಪ್ಪಿಸಿಕೊಂಡು ತೆಳುವಾದ ಬಹುಮತವನ್ನು ಮಾತ್ರ ಪಡೆಯಿತು. ಏಕೆಂದರೆ ಅಲ್ಲಿ ಅಕಾಲಿದಳ, ಸಿ.ಪಿ.ಐ., ಸಿ.ಪಿ.ಎಂ.ಗಳ ವಿಶಾಲ ಪ್ರತಿರೋಧರಂಗ ಇತ್ತು. ಇತರ ರಾಜ್ಯಗಳಲ್ಲಿನ ಬಹುಸಂಖ್ಯಾತ ವಿಜಯಗಳ ಜೊತೆ ಪಂಜಾಬಿನಲ್ಲಿ ಕಾಂಗ್ರೆನ ಸಣ್ಣ ಗೆಲುವು ತೀವ್ರ ವಿಭಿನ್ನತೆಯಲ್ಲಿ ನಿಲ್ಲುತ್ತದೆ. ಬಿಹಾರದಲ್ಲಿ ಮತಗಳ ವಿಭಜನೆ ಆಗಿದ್ದರೂ ಕಾಂಗ್ರೆ ಚುನಾವಣೆಯನ್ನು ಕಳೆದುಕೊಂಡಿದೆ. ಅಲ್ಲಿನ ಘೋಷಿತ ಗೆಲುವು ಬಂದೂಕುಗಳ ಬಳಕೆ ಮತ್ತು ಚುನಾವಣಾ ಫಲಿತಾಂಶಗಳ ಸುಳ್ಳುಪ್ರಕಟಣೆಗಳ ಫಲವಾಗಿದೆ.

ಅನೇಕ ರಾಜ್ಯಗಳಲ್ಲಿ ಕಾಂಗ್ರೆಗೆ ಹೆಚ್ಚು ಸ್ಥಾನಗಳು ಬಂದಿದ್ದರೂ ಪ್ರತಿರೋಧಿ ಶಕ್ತಿಗಳು ಈಗಾಗಲೇ ಬೆಳೆಯುತ್ತಿವೆ. ಕಡಿಮೆ ಮತದಾನ ಮತ್ತು ಇದರೊಳಗೆ ಕಾಂಗ್ರೆಗೆ ಸಿಕ್ಕಿರುವ ಅಲ್ಪಮತಗಳು ಇವೆಲ್ಲವೂ ಜನತೆಯ ಅಸಮಾಧಾನವನ್ನು ಸೂಚಿಸುತ್ತವೆ.

ಅನುಭವದಿಂದ ಪಾಠ ಕಲಿಯಲಿ :

ಪ್ರತಿಗಾಮಿ ಕಾರಣಗಳನ್ನು ಮುಂದೊಡ್ಡುವುದರಿಂದ ಅಥವಾ ಸಣ್ಣ ಲಾಭಗಳಿಗಾಗಿ ಮತೀಯತೆ ಮತ್ತು ಜಾತೀಯತೆಗಳನ್ನು ಕೆರಳಿಸುವುದರಿಂದ, ಸರ್ವಾಧಿಕಾರ ವಿರೋಧಿಯಾದ, ಪ್ರಜಾಪ್ರಭುತ್ವದ ರಕ್ಷಣೆಗಾಗಿ ನಡೆಸುವ ಹೋರಾಟವನ್ನು ಮುಂದುವರೆಸಲು ಸಾಧ್ಯವಿಲ್ಲ ಎಂಬುದನ್ನು ಪೊಲಿಟ್‌ಬ್ಯೂರೋ ಇಲ್ಲಿ ಸೂಚಿಸಬಯಸುತ್ತದೆ. ಇತ್ತೀಚಿನ ಚುನಾವಣಾ ಪ್ರಚಾರಗಳಲ್ಲಿ ಅಸ್ಸಾಂ ವಿವಾದದ ಬಗ್ಗೆ ಕೆಲವು ವಿರೋಧ ಪಕ್ಷಗಳು ಈ ಕೆಲಸವನ್ನೇ ಮಾಡಿವೆ. ದೇಶದ ಐಕ್ಯತೆ ಮತ್ತು ಸೌಹಾರ್ದತೆಗೆ ಭಂಗಬರುವ ವಿಚಾರವನ್ನು ಬಯಲುಮಾಡದೆ, ಈ ಪ್ರತ್ಯೇಕತಾವಾದಿ ಚಳುವಳಿಯನ್ನು ನ್ಯಾಯಬದ್ಧ ಮತ್ತು ಪ್ರಜಾಪ್ರಭುತ್ವವಾದಿ ಚಳುವಳಿ ಎಂದು ಬೆಂಬಲಿಸಿ ರಾಷ್ಟ್ರೀಯ ಐಕ್ಯತೆಯನ್ನು ಕಾಂಗ್ರೆನ ಉದ್ದೇಶ ಬಳಕೆಗೆ ಬಲಿಕೊಟ್ಟಿದ್ದಾರೆ. ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರನ್ನು ಕೊಲೆಮಾಡಿರುವುದು ಅವರ ಯಾವುದೇ ಪ್ರತಿಭಟನೆಯನ್ನು ಕೆರಳಿಸಲಿಲ್ಲ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಇತರ ವಾಮಪಕ್ಷಗಳು ಮಾತ್ರ ರಾಷ್ಟ್ರೀಯ ಐಕ್ಯತೆ ಮತ್ತು ಅಲ್ಪಸಂಖ್ಯಾತರ ರಕ್ಷಣೆಯನ್ನು ಬೆಂಬಲಿಸಿದವು. ಆರೆಸ್ಸೆಸ್-ಜನಸಂಘದ ಪ್ರಾಬಲ್ಯವಿರುವ ಭಾರತೀಯ ಜನತಾ ಪಕ್ಷದವರು ಬಹಿರಂಗವಾಗಿ ಮತೀಯತೆಯನ್ನು ಪ್ರದರ್ಶಿಸಿ, ಅಸ್ಸಾಂನಿಂದ ಮುಸ್ಲಿಮರನ್ನು ಹೊರಗಟ್ಟುವುದನ್ನು ಪ್ರೋತ್ಸಾಹಿಸಿದರು.

ಇವೆಲ್ಲವೂ ಅಲ್ಪಸಂಖ್ಯಾತರು ಇಂದಿರಾ ಕಾಂಗ್ರೆಸ್‌ಕಡೆ ನೋಡುವಂತೆ ಮಾಡಿ, ಅವರೆಲ್ಲ ಆ ಪಕ್ಷಕ್ಕೆ ಬೆಂಬಲ ನೀಡತೊಡಗಿದರು. ಈ ಅನುಭವ ಮತ್ತು ಪಾಠಗಳನ್ನು ಅರಗಿಸಿಕೊಂಡು, ಚುನಾವಣಾ ನಂತರದ ಸವಾಲುಗಳನ್ನು ಎದುರಿಸಲು ಸನ್ನದ್ಧರಾಗಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಇತರ ಎಲ್ಲ ಪಕ್ಷಗಳಿಗೆ ಕರೆ ಕೊಡುತ್ತದೆ. ಚುನಾವಣೆಗಳ ಸಮಯದಲ್ಲಿ ಬೆಳೆದ ವಾಮಪಕ್ಷಗಳ ಸಮೀಪ ಸಂಬಂಧಗಳು ಮತ್ತಷ್ಟು ಬಲವಾಗಿ ಬೆಳೆದರೆ, ಸರ್ವಾಧಿಕಾರ ವಿರೋಧಿಯಾದ ಎಲ್ಲ ಪಕ್ಷಗಳು ಮತ್ತು ಶಕ್ತಿಗಳನ್ನು ಹೆಚ್ಚು ಹತ್ತಿರಕ್ಕೆ ತರಬಹುದೆಂದು ಸಿ.ಪಿ.ಐ.(ಎಂ) ಪರಿಗಣಿಸುತ್ತದೆ.

ಒಗ್ಗಟ್ಟಿನಿಂದ ಪ್ರತಿರೋಧಿಸಿ :

ಸಂಸತ್ತು ಮತ್ತು ವಿಧಾನಸಭೆಗಳ ಮುಂದೆ ಬರಲಿರುವ ಕಾಂಗ್ರೆನ ಎಲ್ಲ ಪ್ರಜಾಪ್ರಭುತ್ವವಿರೋಧಿ ಕ್ರಮಗಳನ್ನು ದೃಢವಾಗಿ ವಿರೋಧಿಸುವಂತೆ ಎಲ್ಲ ಪಕ್ಷಗಳಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಕರೆ ನೀಡುತ್ತದೆ. ಜನತೆಯ ಒಗ್ಗಟ್ಟಿನ ಧ್ವನಿಯು ಸಂಸತ್ ವಲಯದಲ್ಲಿ ಹೆಚ್ಚು ದೃಢವಾಗಿ ಮೊಳಗಬೇಕು ಮತ್ತು ಪ್ರಜಾಪ್ರಭುತ್ವ ಜನತೆಯ ಜೀವನಗಳನ್ನು ರಕ್ಷಿಸುವ ಸಲುವಾಗಿ ಹೆಚ್ಚು ದೃಢವಾಗಬೇಕು. ಅಗತ್ಯ ಸೇವೆಗಳಲ್ಲಿ ಮುಷ್ಕರವನ್ನು ನಿಷೇಧಿಸುವ ಮಸೂದೆಗಳನ್ನು ಕೆಲವೆಡೆಗಳಲ್ಲಿ ಜಾರಿ ಮಾಡಲಾಗಿದೆ. ಇದು ತುರ್ತು ಪರಿಸ್ಥಿತಿ ದಿನಗಳ ಶಾಸನದ ಪುನರಾವರ್ತನೆ. ಸಂಸತ್ ಅಧಿವೇಶನದ ಮುನ್ನ ರಾಸಾಯನಿಕ ಗೊಬ್ಬರಗಳು, ಡೀಸೆಲ್ ಎಣ್ಣೆ, ಪೆಟ್ರೋಲಿಯಂ ವಸ್ತುಗಳ ಬೆಲೆಯನ್ನು ಸರ್ಕಾರ ಏರಿಸಿದೆ. ರೈಲ್ವೆ ದರಗಳನ್ನೂ ಹೆಚ್ಚಿಸಲಾಗುತ್ತಿದೆ. ಡೀಸೆಲ್ ಎಣ್ಣೆಯ ದರ ಏರಿಕೆಯಿಂದ ಬಸ್ ಸಾರಿಗೆಯ ದರಗಳೂ ಏರಲಿವೆ. ರಸಗೊಬ್ಬರಗಳ ಬೆಲೆಏರಿಕೆಯು ರೈತರಿಗೆ ಭಾರಿ ಪೆಟ್ಟನ್ನು ಕೊಟ್ಟಿವೆ. ಇವೆಲ್ಲವನ್ನೂ ಸಂಸತ್ ಮತ್ತು ವಿಧಾನಸಭೆಗಳಲ್ಲಿ ಒಗ್ಗಟ್ಟಾಗಿ ಪ್ರತಿಭಟಿಸಬೇಕು. ಸಂಸತ್ತಿನಲ್ಲಿ ಒಗ್ಗೂಡಿದ ವಿರೋಧವನ್ನು ರೂಪಿಸಲು ವಾಮಪಕ್ಷಗಳು ಐಕ್ಯತೆಯಿಂದ ದೃಢವಾಗಿ ಪ್ರಯತ್ನಿಸಬೇಕು.

ಬಂಡವಾಳಶಾಹಿ ಜಗತ್ತು ತೀವ್ರ ಕುಸಿತದಲ್ಲಿದೆ. ಬಿಕ್ಕಟ್ಟಿನಲ್ಲಿರುವ ಭಾರತದ ಆರ್ಥಿಕತೆ ಮುಂಬರುವ ತಿಂಗಳುಗಳಲ್ಲಿ ಮತ್ತಷ್ಟು ಬಿಕ್ಕಟ್ಟಿಗೊಳಗಾಗಲಿದೆ. ಆರ್ಥಿಕತೆ ಈಗಾಗಲೇ ಕುಸಿತದ ಅಂಚಿನಲ್ಲಿದ್ದು, ಅದನ್ನು ಸರಿಪಡಿಸುವ ಯಾವ ಪ್ರಯತ್ನವೂ ಫಲಪ್ರದವಾಗುತ್ತಿಲ್ಲ. ಹಣದುಬ್ಬರದ ದರ ಈಗಾಗಲೇ ಶೇ. 20ನ್ನು ದಾಟಿದ್ದು, ಅದು ಕೆಳಗಿಳಿಯುವ ಅವಕಾಶವೇ ಇಲ್ಲವಾಗಿದೆ. ಸ್ಥಗಿತ ಮತ್ತು ಹಣದುಬ್ಬರ ಇವೆರಡು ಆರ್ಥಿಕ ಬಿಕ್ಕಟ್ಟಿನ ಸಂಗಾತಿಗಳು. ನಮ್ಮ ಜೊತೆಗೇ ಇರುವಂತೆ ಕಾಣುತ್ತದೆ. ಇಂದಿರಾಗಾಂಧಿ ಭರವಸೆ ನೀಡಿದ ದೃಢತೆ ಒಂದು ಮರೀಚಿಕೆ. ದೇಶವು ಎಲ್ಲ ರೀತಿಯ ಆರ್ಥಿಕ ಅಸ್ಥಿರತೆಗೊಳಗಾಗಿ, ಅದರ ಫಲವನ್ನು ಜನತೆ ಉಣ್ಣಲಿದ್ದಾರೆ, ಹೆಚ್ಚಿನ ಕರ, ಏರು ಬೆಲೆಗಳು, ಸಾರಿಗೆ ವಿದ್ಯುಚ್ಛಕ್ತಿ ದರ ಏರಿಕೆ ಮುಂತಾದುವುಗಳನ್ನೊಳಗೊಂಡ ಬಜೆಟ್ ಜನತೆಯ ಮೇಲೆ ಹೆಚ್ಚು ಭಾರ ಹೊರಿಸಲಿದೆ.

ಪ್ರಜಾಪ್ರಭುತ್ವದ ಮತ್ತು ಜನತೆಯ ಜೀವನದ ರಕ್ಷಣೆಯ ಭಾರ ಈಗ ಸಂಸತ್ ಮತ್ತು ವಿಧಾನಸಭೆಗಳ ಮೇಲೆ ಇಲ್ಲ. ಬೆಲೆ ಏರಿಕೆ, ಕರ, ನಿರುದ್ಯೋಗ ಮುಂತಾದುವುಗಳ ಪರಿಣಾಮಗಳಿಂದ ಜನತೆಯನ್ನು ರಕ್ಷಿಸಲು ಜನರ ಆಂದೋಳನಗಳು ನಡೆಯಬೇಕಾಗಿದೆ. ಜನತೆಯ ಜೀವನವನ್ನು ಎಲ್ಲ ಪಕ್ಷಗಳು ಸಾಮೂಹಿಕ ಸಂಘಟನೆಗಳು ತಮ್ಮೆಲ್ಲ ಬಲವನ್ನು ಕೂಡಿಸಿ ರಕ್ಷಿಸಬೇಕಾಗಿದೆ. ಜನತೆ ಮತ್ತು ಪ್ರಜಾಪ್ರಭುತ್ವಕ್ಕೆ ನಿಷ್ಠರಾಗಿರುವ ಎಲ್ಲ ಪಕ್ಷಗಳೂ ಈ ಹೋರಾಟದಲ್ಲಿ ಒಗ್ಗೂಡಲು ಸಿ.ಪಿ.ಐ.(ಎಂ) ಕರೆನೀಡುತ್ತದೆ. ಎಲ್ಲ ಪಕ್ಷಗಳ ಟ್ರೇಡ್‌ಯೂನಿಯನ್, ಕಿಸಾನ್, ವಿದ್ಯಾರ್ಥಿ ಮತ್ತು ಮಹಿಳಾ ಸಂಘಟನೆಗಳು ಈ ದಿಸೆಯಲ್ಲಿ ಪಾತ್ರ ವಹಿಸಬಹುದು.

ಅಸ್ಸಾಂ ಪರಿಸ್ಥಿತಿ :

ಅಸ್ಸಾಂ, ತ್ರಿಪುರ, ಮೇಘಾಲಯ, ಮಣಿಪುರ ರಾಜ್ಯಗಳ ಜನತೆಯ ಕೆಲವು ನೈಜ ಸಂಕಷ್ಟಗಳನ್ನು ಉಪಯೋಗಿಸಿಕೊಂಡು ಬೆಳೆದಿರುವ ಪ್ರತ್ಯೇಕತಾವಾದಿ ಚಳುವಳಿಗಳು ತುಂಬ ತೊಂದರೆ ತರುವಂಥವಾಗಿವೆ. ಕಳೆದ 33 ವರ್ಷಗಳಲ್ಲಿ ಆಳುವ ಬಂಡವಾಳಶಾಹಿ-ಭೂಮಾಲೀಕ ಪಕ್ಷಗಳು ಅನುಸರಿಸಿರುವ ಪ್ರಜಾಪ್ರಭುತ್ವವಿರೋಧಿ ನೀತಿಗಳು ಈ ಪ್ರದೇಶದ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಒಳ್ಳೆಯ ಆಹಾರವನ್ನು ಒದಗಿಸಿವೆ. ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಮೇಲಿನ ಈ ಚಳುವಳಿಗಳು ದೇಶದ ಐಕ್ಯತೆ ಮತ್ತು ಜನತೆಯ ಸೌಹಾರ್ದತೆಗೆ ಭಂಗ ತರುತ್ತಿವೆ. ಈ ಪ್ರದೇಶದಲ್ಲಿ ಅಸ್ಥಿರತೆಯನ್ನು ಮೂಡಿಸುವ ಕೆಲಸವನ್ನು ಸಾಮ್ರಾಜ್ಯಶಾಹಿ ಏಜೆನ್ಸಿಗಳೂ ಮಾಡುತ್ತಿವೆಯೆಂಬುದನ್ನು ಮರೆಯುವಂತಿಲ್ಲ.

ದೇಶದ ಐಕ್ಯತೆ ಮತ್ತು ಜನತೆಯ ಸೌಹಾರ್ದತೆಗಳ ರಕ್ಷಣೆಗಾಗಿ ನಡೆಸುವ ಹೋರಾಟವು ಅದಕ್ಕೆ ಬದ್ಧವಾಗಿರುವ ಎಲ್ಲ ಪಕ್ಷಗಳ ತುರ್ತುಗಮನವನ್ನು ಸೆಳೆಯುತ್ತದೆ. ಸಶಸ್ತ್ರಪಡೆಗಳ ವಾಪಸಾತಿ ಮತ್ತು ಸಮಸ್ಯೆಯ ರಾಜಕೀಯ ಪರಿಹಾರಕ್ಕೆ ದಾರಿಮಾಡಲು ತಮ್ಮ ಅಪಾಯಕಾರಿ ಚಳುವಳಿಯನ್ನು ನಿಲ್ಲಿಸುವಂತೆ ಅದರ ನಾಯಕರಿಗೆ ಪೊಲಿಟ್‌ಬ್ಯೂರೋ ಮನವಿ ಮಾಡುತ್ತದೆ. ಈ ಪ್ರತ್ಯೇಕತಾವಾದಿ ಚಳುವಳಿಗೆ ಪ್ರೋತ್ಸಾಹ ನೀಡುತ್ತಿರುವ ಭಾರತೀಯ ಜನತಾಪಕ್ಷವನ್ನು ಪೊಲಿಟ್‌ಬ್ಯೂರೋ ಖಂಡಿಸುತ್ತದೆ. ತಮ್ಮ ಸಂಕುಚಿತ ಗುಂಪುಗಾರಿಕೆ ಪರಿಗಣನೆಗಳನ್ನು ಬಿಟ್ಟು, ಈ ಪ್ರತ್ಯೇಕತಾ ಶಕ್ತಿಗಳ ವಿರುದ್ಧ ದೃಢ ನಿಲುವನ್ನು ತಳೆಯುವಂತೆ ಜನತಾ, ಲೋಕದಳ ಮತ್ತಿತರ ಪಕ್ಷಗಳಿಗೆ ಅದು ಕರೆ ನೀಡುತ್ತದೆ.

[ಮುಂದುವರೆಯುವುದು]

ದಲಿತರ ಚರಿತ್ರಾರ್ಹ ಜಾತಾ

(7ನೇ ಪುಟದಿಂದ)

ಗಳೊಡನೆ ನೊಂದು ಮಾತನಾಡಿದ ಅವರು ದಾಖಲೆ ಆಗದಿರುವ ಪ್ರಕರಣಗಳೇ ಹೆಚ್ಚಿವೆ ಎಂದರು. ದಲಿತ ಸಂಘರ್ಷ ಸಮಿತಿಯ ಹೋರಾಟವು ಎಲ್ಲಾ ದುಡಿಯುವ ಜನರ ಹೋರಾಟವೆಂದು ಘೋಷಿಸಿದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿಗಳು ಈ ಹೋರಾಟಕ್ಕೆ ತಮ್ಮ ಪಕ್ಷದ ಸಂಪೂರ್ಣ ಬೆಂಬಲವಿದೆ ಎಂದು ಪ್ರಕಟಿಸಿದರು. ನೊಂದ ದಲಿತರಿಗಾಗಿ ತಮ್ಮ ಪಕ್ಷದ ವತಿಯಿಂದ ಸಂಗ್ರಹಿಸಿದ್ದ ಸಹಾಯಧನವನ್ನು ಅವರು ದಲಿತ ಸಂಘರ್ಷ ಸಮಿತಿಯ ಸಂಚಾಲಕ ಬಿ. ಕೃಷ್ಣಪ್ಪನವರಿಗೆ ಅರ್ಪಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ದಲಿತ ಸಂಘರ್ಷ ಸಮಿತಿಯ ಮೈಸೂರು ಶಾಖೆಯ ಸಂಚಾಲಕ ಹರಿಹರ ಆನಂದ ಮಾತನಾಡಿ ನ್ಯಾಯ ಕೇಳಿ ಎಪ್ಪತ್ತು ಕಿ.ಮೀ. ದೂರ ನಮ್ಮನ್ನು ನಡೆಸಿದ್ದು ನಮ್ಮ ಹೃದಯದ ನೋವು ಎಂದರು.

ಮಾರನೆಯ ಬೆಳಗ್ಗೆ ಬೆಂಗಳೂರು ಬೀದಿಗಳನ್ನು ಹಾದು ವಿಧಾನಸೌಧದ ಸಮೀಪಕ್ಕೆ ಬಂದರು. ಶಾಸನಸಭೆ ನಡೆಯುತ್ತಿತ್ತು. ಕಬ್ಬನ್‌ಪಾರ್ಕಿನ ಹಸಿರು ಮರಗಳ ಕೆಳಗಿನ ಹುಲ್ಲಿನ ಮೇಲೆ ಜಾತಾದ ಪ್ರತಿನಿಧಿಗಳು ಕುಳಿತರು. ಹಾಡು ಹೇಳಿದರು. ಜನ ಇವರ ಸುತ್ತಲೂ ಸೇರಿದರು. ಶೇಷಗಿರಿಯಪ್ಪನ ಕೊಲೆ ನಾಟಕವನ್ನು ಅಭಿನಯಿಸಿದರು.

ನಾಟಕದ ನಂತರ, ನೆರೆದಿದ್ದ ಸಭಿಕರನ್ನು ಉದ್ದೇಶಿಸಿ ಮಾತನಾಡಿದ ಕನ್ನಡದ ಖ್ಯಾತ ಸಾಹಿತಿ ಪಿ. ಲಂಕೇಶರು ಶೇಷಗಿರಿಯಪ್ಪನ ಕೊಲೆ ವ್ಯರ್ಥವಾಗಬಾರದು, ಅದು ನಿಮ್ಮ ಸಿಟ್ಟನ್ನು ಹತ್ತು ಹಲವುಪಟ್ಟು ಹೆಚ್ಚಿಸಬೇಕು, ಆ ಸಿಟ್ಟೇ ಹೊಸ ಆರೋಗ್ಯಪೂರ್ಣ ಸಮಾಜದ ಅಡಿಗಲ್ಲಾಗಲಿ ಎಂದು ಹೇಳಿದರು.

ಬಂಡವಾಳಶಾಹಿ ಮತ್ತು ಜಮೀನ್ದಾರಿ ಆರ್ಥಿಕ ವ್ಯವಸ್ಥೆಯಿಂದ ಇಂತಹ ನೋವಿನ ಪ್ರಕರಣಗಳು ನಡೆದುಕೊಂಡು ಬಂದಿವೆ ಎಂದವರು ಮತ್ತೊಬ್ಬ ಭಾಷಣಕಾರ ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷ ಎಸ್. ಸೂರ್ಯನಾರಾಯಣರಾವ್. ಪ್ರಸ್ತುತ ಆರ್ಥಿಕ ವ್ಯವಸ್ಥೆಯ ಜಾಗದಲ್ಲಿ ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸುವುದೇ ಈ ನೋವಿನ ಪ್ರಕರಣಗಳನ್ನು ನಿಲ್ಲಿಸೀತು ಎಂದೂ ಅವರು ಹೇಳಿದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಅಖಿಲ ಭಾರತ ಹಿಂದ್ ಮಜ್‌ದೂರ್ ಸಭಾದ ಅಧ್ಯಕ್ಷ ಎಸ್. ವೆಂಕಟರಾಮ್ ಅವರು ಶೇಷಗಿರಿಯಪ್ಪನ ಕುಟುಂಬಕ್ಕೆ ನ್ಯಾಯ ಕೇಳಿ ಬಂದ ನೂರಾರು ಯುವಜನರ ಸ್ವಾಗತಕ್ಕೆ ಬೆಂಗಳೂರಿನ ದುಡಿಯುವ ಜನತೆಯನ್ನು ಸಂಘಟಿಸದೇ ಇದ್ದದ್ದು ತಮ್ಮ ಹಾಗೂ ಇತರ ಟ್ರೇಡ್ ಯೂನಿಯನ್ ನಾಯಕರುಗಳ ತಪ್ಪೆಂದು ಒಪ್ಪಿಕೊಂಡರು. 'ನಿಮ್ಮ ಚಳುವಳಿಯ ಜೊತೆಗೆ ತನ್ನ ಮನಸ್ಸು ಹಾಗೂ ಹೃದಯ ಇದೆ' ವೈಯಕ್ತಿಕ ಸಹಾಯ ಹಸ್ತ ಚಾಚುತ್ತಾ ಅವರು ಮಾತು ಮುಗಿಸಿದರು.

ದೂರದಿಂದ ದಣಿದು ಬಂದಿದ್ದ ದಲಿತರ ಅಹವಾಲನ್ನು ಕೇಳಲು ರಾಜ್ಯದ ದೊರೆಗಳಿಗೆ ಸಮಯವಿಲ್ಲ ಎಂಬ ಉತ್ತರ ದಲಿತರಿಗೆ ಸಿಕ್ಕಿತು. ಸಿಟ್ಟಿಗೆದ್ದ ದಲಿತರು ದೊರೆಗಳನ್ನು ಕಂಡೇಕಾಣುತ್ತೇವೆ—ನಮಗೆ ದಾರಿ ಬಿಡಿ ಎಂದು ಶಾಂತಿಯುತವಾಗೇ ಹೊರಟರು. ಪೋಲೀಸರ ಲಾಠಿಏಟು ಅವ್ಯಾಹತವಾಗಿ ಸಿಕ್ಕಿದವು. ಪತ್ರಕರ್ತರೆಂದು ಹೇಳಿಕೊಂಡ 'ಐಕ್ಯರಂಗ' ಹಾಗೂ 'ಪ್ರಜಾವಾಣಿ'ಯ ಪತ್ರಕರ್ತರನ್ನೂ ಬಿಡಲಿಲ್ಲ. ಚೆನ್ನಾಗಿ ಥಳಿಸಿದ ನಂತರ ಪೋಲೀಸರು ಬಂಧಿಸಿ ಮರುದಿನ ಮಧ್ಯಾಹ್ನ ಒಂದು ಗಂಟೆಗೆ ಸ್ವಯಂ ಜಾಮೀನಿನ ಮೇಲೆ ದಲಿತರನ್ನು ಬಿಡುಗಡೆ ಮಾಡಲಾಯಿತು.

ಮುಂದೆ ಏನು ಮಾಡಬೇಕೆನ್ನುವುದರ ಬಗ್ಗೆ ಯೋಜನೆಗಳನ್ನು ಹಾಕಲಾಗುತ್ತಿದೆ.

—ಶಂಕರಲಾಳಾಪುರ

ಹುಣಿಸೆಕೋಟೆಯಲ್ಲಿ ಕಾರ್ಮಿಕರ ಪ್ರದರ್ಶನಕ್ಕೆ ತಯಾರಿ

ಜೂನ್ 14, 15ರಂದು ಶಿಡ್ಲಘಟ್ಟ ತಾಲ್ಲೂಕಿನ ಮಳ್ಳೂರಿನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಸಮಿತಿಯ ಸಭೆ ಕಾಂ. ಜಿ. ಪಾಪಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪಕ್ಷದ ರಾಜ್ಯ ಸಮಿತಿಯ ಸೆಕ್ರೆಟಾರಿಯೆಟ್ ಸದಸ್ಯರಾದ ಕಾಂ. ಸಿ ನಂಜುಂಡಪ್ಪ ಮತ್ತು ಕಾಂ. ವಿ. ಜೆ. ಕೆ. ನಾಯರ್‌ರವರು ಸಭೆಯಲ್ಲಿ ಉಪಸ್ಥಿತರಿದ್ದರು.

ಸಭೆಯು ಜಿಲ್ಲೆಯಲ್ಲಿ ಅಲ್ಲಲ್ಲಿ ಬಡ ರೈತರ, ದಲಿತರ, ಕೃಷಿಕೂಲಿಗಾರರ ಮೇಲೆ ನಡೆಯುತ್ತಲಿರುವ ದಬ್ಬಾಳಿಕೆಯನ್ನು, ಹುಣಿಸೆಕೋಟೆಯ ಕುಂಬಾರ ಶೇಷಗಿರಿಯಪ್ಪನವರ ಕೊಲೆಯ ನಂತರದ ಪರಿಸ್ಥಿತಿಯನ್ನು ಅವಲೋಕಿಸಿ ಹನ್ನೆರಡನೆಯ ತಾರೀಕು ವಿಧಾನಸೌಧದ ಬಳಿ ಕಬ್ಬನ್‌ಪಾರ್ಕಿನಲ್ಲಿ ಹುಣಿಸೆಕೋಟೆಯಿಂದ ಪಾದಯಾತ್ರೆ ಬಂದ ದಲಿತರ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ಮತ್ತು ಪತ್ರಕರ್ತ ಇಂದೂಧರ ಹೊನ್ನಾಪುರರವರಿಗೆ ಬಾಸುಂಡೆ ಬರುವಂತೆ ಹೊಡೆದ ಪೋಲೀಸರ ಕ್ರೌರ್ಯವನ್ನು ತೀವ್ರವಾಗಿ ಖಂಡಿಸುವ ನಿರ್ಣಯವನ್ನು ಅಂಗೀಕರಿಸಿತು.

ಜೂನ್ 29ರಂದು ಹುಣಿಸೆಕೋಟೆಯಲ್ಲಿ ದಿವಂಗತ ಶೇಷಗಿರಿಯಪ್ಪನವರ ಕುಟುಂಬದ ಬೆಂಬಲಾರ್ಥವಾಗಿ ಕಾರ್ಮಿಕ ಪ್ರದರ್ಶನವನ್ನು ನಡೆಸಬೇಕೆಂದು ಸಭೆಯು ತೀರ್ಮಾನಿಸಿತು.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT